**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು ; ಋಷಿಗಳು ನಮ್ಮ ಮಾರ್ಗದರ್ಶಿಗಳು

# ತಪೋವಾಣಿ

ಸಂಪುಟ 18 ಸಂಚಿಕೆ 10 ಅಕ್ಟೋಬರ್ 2021 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಫೆಬ್ರುವರಿ 2008ರ ಸಂಚಿಕೆ)

ಇಸವಿ 1980. ನಾನು ಅಮರರವರನ್ನು ಕೇಳಿದೆ: “ನಮ್ಮಲ್ಲಿ ಎಷ್ಟೊಂದು ಜ್ಞಾನವಿದೆ. ನಮ್ಮ ಕಾರ್ಯದ ಬಗ್ಗೆ ಪ್ರಚಾರ ಮಾಡಿ ನಮ್ಮಲ್ಲಿರುವ ಜ್ಞಾನವನ್ನು ಹರಡಬಾರದೆ?” ಅಮರ ನಸುನಕ್ಕರು. ಅವರ ನಗುವಿನ ಹಿಂದಿನ ವಿವೇಕವನ್ನು ನನಗೆ ಅರ್ಥಮಾಡಿಕೊಳ್ಳಲಾಗಲಿಲ್ಲ. ಈಗ, 28 ವರ್ಷಗಳ ನಂತರ, ಆ ನಗುವನ್ನು ನಾನು ಅರ್ಥಮಾಡಿಕೊಳ್ಳುತ್ತಿದ್ದೇನೆ! ಅವರ ಬಳಿಯಿದ್ದ ಜ್ಞಾನಕ್ಕೆ ಜನರಿನ್ನೂ ಸಿದ್ಧರಿರಲಿಲ್ಲ ಎನ್ನುವುದು ಅವರಿಗೆ ತಿಳಿದಿತ್ತು. ನಾವು ಆಗಿನ್ನೂ ಬೆಳಕಿನ ಯುಗವನ್ನು ಪ್ರವೇಶಿಸಿದ್ದೆವಷ್ಟೆ. ಈಗ, 28 ವರ್ಷಗಳ ನಂತರ, ಹೆಚ್ಚಿನ ಸಂಖ್ಯೆಯಲ್ಲಲ್ಲದಿದ್ದರೂ ನಮ್ಮಲ್ಲಿ ಸಿದ್ಧರಾಗಿರುವವರೂ ಉತ್ಸುಕರಾಗಿರುವವರೂ ಇದ್ದಾರೆ. ಆದರೆ, ಈಗಲೂ ನಾನು ಅಮರರವರ ಮುಖದಲ್ಲಿ ನಗುವನ್ನು ಕಾಣುತ್ತೇನೆ!

ಆಧ್ಯಾತ್ಮಿಕ ಆಕಾಂಕ್ಷಿಗಳು ದೈವೀ ಜೀವಿಗಳಾಗಲು ಇಚ್ಛಿಸುವ ಮೊದಲು ಒಳ್ಳೆಯ ಮನುಷ್ಯರಾಗಬೇಕೆಂದು ಈಗೀಗ ನಾನು ಹೇಳುತ್ತಿರುತ್ತೇನೆ. ಅಮರರವರು ಪರಿಪೂರ್ಣ ಮಾನವರಾಗಿದ್ದರು. ಅವರು ನಗುತ್ತಿದ್ದರು, ಆಡುತ್ತಿದ್ದರು, ಮತ್ತು ಸಂತನ ಯಾವುದೇ ಪರಿವೇಷಗಳಿಲ್ಲದೆ ನಮ್ಮಲ್ಲಿ ಒಬ್ಬರಂತೆ ಬಾಳಿದರು. ಜನರು ಅವರನ್ನು ಜ್ಯೋತಿ ಕಾರ್ಯವನ್ನು ನಿರ್ವಹಿಸುತ್ತಿರುವ ಋಷಿ ಎಂದು ಗುರುತಿಸಲಿಲ್ಲ. ಅಮರರವರಿಗೆ ಅದರ ಅರಿವಿತ್ತು. ಆದರೆ ಅದರ ಬಗ್ಗೆ ಅವರೆಂದೂ ತಲೆಕೆಡಿಸಿಕೊಳ್ಳಲಿಲ್ಲ. ಅವರು ತಮ್ಮ ಬಗ್ಗೆ ಬೇರೆಯವರಿಗೆ ವಿವರಿಸಲೂ ಇಲ್ಲ. ಅವರು ನಿಜವಾದ ಮಾಸ್ಟರ್‌ನಂತೆ ಬೆಳಕಿನೊಂದಿಗೆ ಬದುಕಿದರು.

ಅಮರರವರು ಏಕಾಂತವಾಸಿಯಾಗಿ ಬದುಕಿದರು ಹಾಗೂ ಬೆಳಕನ್ನು ಅರಸುವವರಿಗೆ ಮಾತ್ರ ಸಿಗುತ್ತಿದ್ದರು. ಅವರು ತಮ್ಮ ಇಚ್ಛಾಶಕ್ತಿ ಮಾತ್ರದಿಂದಲೇ ಉಳಿದವರನ್ನು ದೂರ ಇಟ್ಟಿದ್ದರು. ಪ್ರಚಾರವು ಕುತೂಹಲಿಗಳು, ಸಿನಿಕರು, ಬುದ್ಧಿಜೀವಿಗಳು ಹಾಗೂ ಸತ್ಯಗಳನ್ನು ಕೇಳಲು, ಅರ್ಥಮಾಡಿಕೊಳ್ಳಲು ಮತ್ತು ಅನುಭವಿಸಲು ಸಿದ್ಧರಿರದವರು ಮುಂತಾದ ಎಲ್ಲ ವಿಧದ ಜನಗಳನ್ನೂ ತರುತ್ತದೆ ಎಂದು ಅವರು ವಿವರಿಸಿದರು. ನಾವು ಭೌತಿಕ ಮಟ್ಟದಲ್ಲಿ ಮಾತ್ರವಲ್ಲದೆ, ಉನ್ನತವಾದ ಸೂಕ್ಷ್ಮ ಮಟ್ಟದಲ್ಲೂ ಕೆಲಸ ಮಾಡಲು ಸಮಯ ಹಾಗೂ ಜಾಗಕ್ಕಾಗಿ ಹೆಣಗಾಡುತ್ತಿರುವಾಗ, ಪ್ರಚಾರವು ಉದ್ದೇಶಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತದೆ. ಅಮರರವರಿಗೆ ಇದರ ಅರಿವಿತ್ತು.

ಅಮರರವರ ಬಗ್ಗೆ ಹೆಚ್ಚು ತಿಳಿದಷ್ಟೂ ತಿಳಿದುಕೊಳ್ಳಲು ಮತ್ತು ಅರ್ಥಮಾಡಿಕೊಳ್ಳಲು ಇನ್ನೂ ಹೆಚ್ಚು ಉಳಿದಿರುತ್ತದೆ.

---

ಗುಂಪುಗಳು ಯುವತಿಯರಿಗೆ ಸಾರ್ವಜನಿಕವಾಗಿ ಕಿರುಕುಳ ನೀಡಿದಾಗ ಒಳ್ಳೆಯವರಾಗಿರುವ ಮತ್ತು ವ್ಯಕ್ತಿಗತವಾಗಿ ಸಭ್ಯವಾಗಿ ವರ್ತಿಸುವ ಜನರು ಗುಂಪಿನಲ್ಲಿ ಸೇರಿಕೊಂಡಾಗ ಏಕೆ ಮೃಗಗಳಂತಾಗುತ್ತಾರೆ ಎಂದು ನಾನು ಅಚ್ಚರಿ ಪಡುತ್ತೇನೆ! ಇದು ಹೀಗೇಕೆ ಎನ್ನುವುದರ ಬಗ್ಗೆ ಸಂಪುಟಗಳನ್ನೇ ಬರೆಯಲಾಗಿದೆ. ಆದರೆ ನನ್ನ ಮನಸ್ಸಿಗೆ ಮುಖ್ಯವಾಗಿ ಹೊಳೆಯುವುದೇನೆಂದರೆ, ಅಂತಹ ಜನರಿಗೆ ನಾಗರಿಕತೆಯ ಸೂತ್ರಗಳಿಗೆ ಬದ್ಧರಾಗಿರಲು ಸಾಕಷ್ಟು ಆಂತರಿಕ ಆಧ್ಯಾತ್ಮಿಕ ಶಕ್ತಿ ಇರುವುದಿಲ್ಲ.

ಆಂತರಿಕ ಆಧ್ಯಾತ್ಮಿಕ ಶಕ್ತಿ ಸುಲಭವಾಗಿ ಬರುವುದಿಲ್ಲ. ಅದು ಬೌದ್ಧಿಕ ಜ್ಞಾನದಿಂದ ಬರುವುದಿಲ್ಲ. ಅದು ಕೇವಲ ಅನುಭವದಿಂದ ಮಾತ್ರ ಬರುತ್ತದೆ. ಬೆಳಕಿನ ಅನುಭವ; ಸತ್ಯದ ಅನುಭವ. ನಾವು ಸತ್ಯವನ್ನು ಅನುಭವಿಸಿದಾಗ, ನಮ್ಮಲ್ಲಿ ಬ್ರಹ್ಮಾಂಡದ ಜ್ಞಾನವಿರುತ್ತದೆ. ಆ ಜ್ಞಾನವನ್ನು ನಾವು ನಮ್ಮ ಬದುಕಿನಲ್ಲಿ ಬಳಸಿಕೊಳ್ಳಬಹುದು. ಆಗ ನಾವು ಪರಿಪೂರ್ಣ ಮಾನವರಂತೆ ಬದುಕುತ್ತೇವೆ. ನಮ್ಮೊಂದಿಗೆ ನಾಗರಿಕತೆಯೂ ಬೆಳೆಯುತ್ತದೆ. ನಮ್ಮ ಪ್ರಬುದ್ಧತೆಯೊಂದಿಗೆ ಯುಗವೂ ವಿಕಸನಗೊಳ್ಳುತ್ತದೆ. ಎಲ್ಲೆಡೆ ಬೆಳಕು ಇದ್ದಾಗ ಅಂಧಕಾರವೆಲ್ಲ ಮಾಯವಾಗುತ್ತದೆ.

ಅನುಭವಿಸಲು, ನಾವು ಧ್ಯಾನ ಮಾಡಬೇಕು. ಧ್ಯಾನಕ್ಕೆ ಯಾವುದೂ ಪರ್ಯಾಯವಲ್ಲ. ■

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

ಕೋವಿಡ್ ಪರಿಸ್ಥಿತಿಯ ಕಾರಣದಿಂದಾಗಿ, ಬೆಂಗಳೂರು ನಗರದ ಕೇಂದ್ರಗಳಲ್ಲಿನ ಧ್ಯಾನದ ತರಗತಿಗಳನ್ನು ಮಾರ್ಚ್ 2021ರವರೆಗೆ ರದ್ದುಪಡಿಸಲಾಗಿತ್ತು. ಪಿಡುಗು ಇನ್ನೂ ನಿಂತಿಲ್ಲದಿರುವುದನ್ನು ಮತ್ತು ಪರಿಸ್ಥಿತಿಯು ಇನ್ನೂ ಪೂರ್ಣವಾಗಿ ನಿಯಂತ್ರಣದಲ್ಲಿ ಇಲ್ಲದಿರುವುದನ್ನು ಪರಿಗಣಿಸುತ್ತಾ ಮುಂದಿನ ಸೂಚನೆಯವರೆಗೆ ತರಗತಿಗಳನ್ನು ತೆರೆಯಲಾಗುವುದಿಲ್ಲ. ಪರಿಸ್ಥಿತಿಯನ್ನು ಗಮನಿಸುತ್ತಿರುತ್ತೇವೆ ಮತ್ತು ತರಗತಿಗಳನ್ನು ಯಾವಾಗ ಪುನರಾರಂಭಿಸಬೇಕೆನ್ನುವುದನ್ನು ನಿರ್ಧರಿಸುತ್ತೇವೆ.

ಅಲ್ಲಿಯವರೆಗೂ ವೆಬ್‌ಕಾಸ್ಟ್ ಮೂಲಕ ಭಾನುವಾರದ ತರಗತಿಗಳು ಆನ್‌ಲೈನ್‌ನಲ್ಲಿ ಮುಂದುವರಿಯುತ್ತವೆ. ಬೇಸಿಕ್ ತರಗತಿಗಳನ್ನು ಕೂಡ, ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ 11ರವರೆಗೆ 'ಆನ್‌ಲೈನ್'ನಲ್ಲಿ ನಡೆಸಲಾಗುತ್ತಿದೆ. ಪ್ರತಿ ತಿಂಗಳಿನ ಮೊದಲನೇ ಭಾನುವಾರ ಹೊಸ ಬ್ಯಾಚ್ ಪ್ರಾರಂಭವಾಗುತ್ತದೆ.

ಹಾಗೂ, ಪ್ರತಿ ತಿಂಗಳು 3ನೇ ಭಾನುವಾರ, ಮಾರ್ಗದರ್ಶಿತ ನೇರ ಆನ್‌ಲೈನ್ ಲೈಟ್ ಚಾನಲಿಂಗ್ ಸೆಷನ್ ನಡೆಸಲಾಗುತ್ತದೆ. ಇದು ಎಲ್ಲರಿಗೂ ತೆರೆದಿರುತ್ತದೆ. ಇದಕ್ಕಾಗಿ ಕೆಳಗಿನ ಲಿಂಕ್‌ಗಳನ್ನು ಬಳಸಿಕೊಳ್ಳಿ:

https://www.lightagemasters.com/lc_live
https://www.facebook.com/lightchannels
https://youtube.com/RevolutionByLight

**ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.**

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/-ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

**ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.**



**29-08-2021 ರಂದು ತಪೋನಗರದಲ್ಲಿ ನಡೆದ ಮಹರ್ಷಿ ಅಮರರವರ ಮಹಾ ಸಮಾಧಿ ಕಾರ್ಯಕ್ರಮ**

### ಸುದ್ದಿ-ಸೂಚನೆಗಳು

- ಮಹರ್ಷಿ ಅಮರರವರ ಸಮಾಧಿ ದಿನವನ್ನು 29 ಆಗಸ್ಟ್ 2021ರಂದು ಆಚರಿಸಲಾಯಿತು. ನಮ್ಮ ಕಾರ್ಯಕರ್ತರು ಮತ್ತು ತಪೋನಗರದ ನಿವಾಸಿ ಧ್ಯಾನಿಗಳು, ಹೊಸದಾಗಿ ನವೀಕರಣಗೊಂಡ ಧ್ಯಾನ ಮಂದಿರದಲ್ಲಿ ಧ್ಯಾನ ಮಾಡಲು ಮತ್ತು ಮಹಾನ್ ಮಾಸ್ಟರ್‌ಗೆ ತಮ್ಮ ಗೌರವವನ್ನು ಅರ್ಪಿಸಲು ಒಟ್ಟಿಗೆ ಸೇರಿದ್ದರು. ಇತರ ಧ್ಯಾನಿಗಳು ತಮ್ಮ ತಮ್ಮ ಸ್ಥಳಗಳಿಂದಲೇ ವೆಬ್‌ಕಾಸ್ಟ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.
- ತಪೋನಗರದ ಮತ್ತು ಅಂತರ್ ಮಾನಸದ ಎಲ್ಲಾ ಕಟ್ಟಡಗಳು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಧ್ಯಾನಕ್ಕಾಗಿ ತೆರೆದಿರುತ್ತವೆ.
- ಭಾನುವಾರದ ತರಗತಿಗಳು ಧ್ಯಾನದ ಎಲ್ಲಾ ವಿದ್ಯಾರ್ಥಿಗಳು ಭೌತಿಕವಾಗಿ ಸೇರಲು ಇನ್ನೂ ತೆರೆದಿಲ್ಲ. ಅವರೆಲ್ಲರೂ ಲೈವ್ ವೆಬ್‌ಕಾಸ್ಟ್ ಮೂಲಕ ತರಗತಿಗಳಿಗೆ ಹಾಜರಾಗುವುದನ್ನು ಮುಂದುವರೆಸಲು ವಿನಂತಿಸಿಕೊಳ್ಳುತ್ತೇವೆ.
- ನಗರದ ವಿವಿಧ ಕೇಂದ್ರಗಳಲ್ಲಿ ಧ್ಯಾನದ ತರಗತಿಗಳು ಇನ್ನೂ ಆರಂಭವಾಗಿಲ್ಲ.
- ಶಂಬಲ ಗ್ರೂಪ್‌ನ ಧ್ಯಾನಿಗಳು ಸೆಪ್ಟೆಂಬರ್ 12ರಂದು ಲೈವ್ ವೆಬ್‌ಕಾಸ್ಟ್ ಮೂಲಕ ತರಗತಿಯಲ್ಲಿ ಪಾಲ್ಗೊಂಡರು ಮತ್ತು ಶಂಬಲ ಮಾಸ್ಟರ್‌ಗಳಿಂದ ದೀಕ್ಷೆ ಪಡೆಯಲು ಮೈಂಡ್‌ಲಿಂಕ್ ಮಾಡಿಕೊಂಡು ಧ್ಯಾನಮಾಡಿದರು.
- ರಾ ಗ್ರೂಪ್‌ನ ಧ್ಯಾನಿಗಳು ಸೆಪ್ಟೆಂಬರ್ 19ರಂದು ಲೈವ್ ವೆಬ್‌ಕಾಸ್ಟ್ ಮೂಲಕ ತರಗತಿಯಲ್ಲಿ ಪಾಲ್ಗೊಂಡರು ಮತ್ತು ರಾ ಚೈತನ್ಯಗಳನ್ನು ಪಡೆಯಲು ಮೈಂಡ್‌ಲಿಂಕ್ ಮಾಡಿಕೊಂಡು ಧ್ಯಾನಮಾಡಿದರು.

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ವೀಕ್ಷಿಸಲು ದಯವಿಟ್ಟು www.speakingtree.inಗೆ ಭೇಟಿ ಕೊಡಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 05 | ಮಂಗಳ | ಮಾಸ ಶಿವರಾತ್ರಿ |
| 06 | ಬುಧ | ಮಹಾಲಯ ಅಮಾವಾಸ್ಯೆ |
| 07 | ಗುರು | ನವರಾತ್ರಿ ಆರಂಭ |
| 12 | ಮಂಗಳ | ಸರಸ್ವತಿ ದೇವಿ ಪೂಜೆ |
| 13 | ಬುಧ | ದುರ್ಗಾಷ್ಟಮಿ |
| 14 | ಗುರು | ಮಹಾ ನವಮಿ<br>ಆಯುಧ ಪೂಜೆ |
| 15 | ಶುಕ್ರ | ವಿಜಯ ದಶಮಿ |
| 20 | ಬುಧ | ಪೂರ್ಣಿಮೆ |
| 29 | ಶುಕ್ರ | ಕೃಷ್ಣ ಅಷ್ಟಮಿ |

### ಈ ತಿಂಗಳು ತಪೋನಗರದಲ್ಲಿ

ಸದ್ಯದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ವರ್ಚುವಲ್ ಆಗಿ ವೆಬ್‌ಕಾಸ್ಟ್ ಮೂಲಕ ನಡೆಸಲಾಗುತ್ತಿದೆ ಮತ್ತು ಸದ್ಯಕ್ಕೆ ತಪೋನಗರದಲ್ಲಿ ಯಾವುದೇ ರೀತಿಯ ಭೌತಿಕ ಸಭೆಗಳು ಇಲ್ಲ.

ಭಾನುವಾರಗಳು : ಉಪನ್ಯಾಸಗಳು :
ಬೆಳಿಗ್ಗೆ 11ರಿಂದ ಮಧ್ಯಾಹ್ನ 12
ಲೈಟ್ ಚಾನೆಲಿಂಗ್:
ಮಧ್ಯಾಹ್ನ 12 ರಿಂದ 1

#### ನವರಾತ್ರಿಯ ವಿಶೇಷ ಧ್ಯಾನದ ತಂತ್ರ

ಅಕ್ಟೋಬರ್ 7ರಿಂದ ಆರಂಭವಾಗುವ ನವರಾತ್ರಿಯ ಸಮಯದಲ್ಲಿ, ನಮಗೆ ಆದಿ ಶಕ್ತಿಯ ಉಪಸ್ಥಿತಿಯ ಅನುಗ್ರಹವಾಗಲಿದೆ. ನಾವು ಹೆಚ್ಚು ಧ್ಯಾನ ಮಾಡಿ ಆಕೆಯಿಂದ ಹೆಚ್ಚಿನ ಚೈತನ್ಯಗಳನ್ನು ಪಡೆಯಬಹುದು. ನಾವು ಆಕೆಯ ಇರುವಿಕೆಯ ಅರಿವನ್ನೂ ಹೊಂದಿರಬಹುದು. ನವರಾತ್ರಿಯ ಆರಂಭದ ದಿನದಿಂದ 10 ದಿನಗಳ ಕಾಲ ಈ ವಿಶೇಷ ತಂತ್ರದೊಂದಿಗೆ ನಾವು ಧ್ಯಾನ ಮಾಡಬಹುದು - ನೀಲಿ ಬಣ್ಣದ ಬೆಳಕಿನಿಂದ ಮಾಡಿದ ಒಂದು ಬೃಹದಾಕಾರವಾದ ಗೋಲವನ್ನು ಊಹಿಸಿಕೊಳ್ಳಿ, ಈ ಗೋಲವನ್ನು ಪ್ರವೇಶಿಸಿ. ಈ ಬೆಳಕಿನ ಗೋಲವನ್ನು ಅನುಭವಿಸಿ, ಆದಿ ಶಕ್ತಿಯ ಚೈತನ್ಯಗಳನ್ನು ಅನುಭವಿಸಿ. ಪುನರುಚ್ಚಿಸಲು ಯಾವುದೇ ಮಂತ್ರವಿಲ್ಲ. ಈ ತಂತ್ರವನ್ನು ರೆಗ್ಯುಲರ್ ಧ್ಯಾನದ ಅಭ್ಯಾಸದ ಬದಲಾಗಿ ಹತ್ತು ದಿನಗಳ ಕಾಲ ಅಭ್ಯಾಸ ಮಾಡಬಹುದು.

## ಲೈಟ್ ಚಾನಲಿಂಗ್ ಅನುಭವಗಳು ಮತ್ತು ಶಾಲೆಗಳಿಂದ ಬಂದ ಪ್ರತಿಕ್ರಿಯೆಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ

ಬಹಳ ಕೃತಜ್ಞತೆಯಿಂದ ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ. ನಮ್ಮ ಮಕ್ಕಳಿಗೆ ಲೈಟ್ ಚಾನೆಲಿಂಗ್ ತರಬೇತಿ ನೀಡಲು ನಿಮ್ಮ ಸಂಸ್ಥೆ ನಮ್ಮಲ್ಲಿಗೆ ಬಂದು ಕೇಳಿದಾಗ ಅದು ನಿಜವಾಗಿಯೂ ನಮ್ಮ ಭಾಗ್ಯವಾಗಿತ್ತು. ಈಗಷ್ಟೇ ನಾವು ಧ್ಯಾನವನ್ನು ನಮ್ಮ ಶಾಲೆಯಲ್ಲಿ ಆರಂಭಿಸಿದ್ದೇವೆ ಮತ್ತು ನಿಮ್ಮ ಸೆಷನ್, ಸಮಯಕ್ಕೆ ಸರಿಯಾಗಿತ್ತು ಮತ್ತು ಲಾಭದಾಯಕವಾಗಿತ್ತು. ಚಿಕ್ಕ ವಯಸ್ಸಿನ ಗುಂಪಿಗೆ ಸೇರಿದವರಿಗೆ ಎಷ್ಟರ ಮಟ್ಟಿಗೆ ಲಾಭವಾಗುತ್ತದೆಂದು ಪ್ರಾರಂಭದಲ್ಲಿ ನಮಗೆ ಸಂಶಯ ಇದ್ದರೂ ಈ ವಯಸ್ಸಿನ ಗುಂಪಿನವರೇ ಹೆಚ್ಚು ಗ್ರಹಿಸಿದ್ದಾರೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಲೈಟ್ ಚಾನಲಿಂಗ್ ಅನ್ನು ನಮ್ಮ ಶಾಲೆಯ ನಿಯತ ಕ್ರಮವನ್ನಾಗಿ ಮಾಡಿಕೊಂಡಿದ್ದೇವೆ ಮತ್ತು ಮುಂದಿನ ದಿನಗಳಲ್ಲಿ ಈ ಅಭ್ಯಾಸವನ್ನು ಮುಂದುವರೆಸಲು ಆಶಿಸುತ್ತೇವೆ. ಬೆಲೆಕಟ್ಟಲಾಗದ ಈ ಅವಕಾಶಕ್ಕಾಗಿ ಇನ್ನೊಮ್ಮೆ ನಿಮಗೆ ಧನ್ಯವಾದಗಳು.

–ಮಿಸ್ ದೈವನೈ, ಪ್ರಾಂಶುಪಾಲರು, ಚೆಟ್ಟಿನಾಡ್ ಹರಿ ವಿದ್ಯಾಲಯಮ್, ಚೆನ್ನೈ

ಲೈಟ್ ಚಾನೆಲಿಂಗ್ ನಿಜವಾಗಿಯೂ ತುಂಬಾ ಉಪಯೋಗದ ತಂತ್ರ. ಈ ಮೂಲಕ ವಿದ್ಯಾರ್ಥಿಗಳ ಎಳೆ ಮನಸ್ಸು ತಾಜಾವಾಗಿರುತ್ತದೆ. ಇದು ಅವರ ಜ್ಞಾಪಕ ಶಕ್ತಿ ಮತ್ತು ಏಕಾಗ್ರತೆಯನ್ನು ಉತ್ತಮಗೊಳಿಸಲು ಸಹಾಯ ಮಾಡುತ್ತದೆ. ಅವರ ಪರೀಕ್ಷೆಯ ಸಮಯಗಳಲ್ಲಿ ಅವರು ಪ್ರಶಾಂತವಾಗಿರಲು ನಾವು ಇದನ್ನು ಅವರಿಂದ ಅಭ್ಯಾಸ ಮಾಡಿಸಲು ಇಷ್ಟಪಡುತ್ತೇವೆ. ಧನ್ಯವಾದಗಳು.

–ಮಿಸ್. ಸ್ವೀಟಿ, ಪ್ರಾಂಶುಪಾಲರು, ಸಲ್ಮ ಮೆಟ್ರಿಕ್ ಹೈಯರ್ ಸೆಕೆಂಡರಿ ಸ್ಕೂಲ್, ಉದನ್‌ಗುಡಿ, ತೂತುಕುಡಿ ಜಿಲ್ಲೆ

ಪ್ರತಿ ದಿನ ನಮ್ಮ ಶಾಲೆಯಲ್ಲಿ ತರಗತಿಗಳು ಶುರುವಾಗುವ ಮುಂಚೆ ಲೈಟ್ ಚಾನೆಲಿಂಗ್ ಮಾಡುತ್ತೇವೆ, ಮತ್ತು ವಿಶೇಷವಾಗಿ ಶುಕ್ರವಾರದ ದಿನಗಳಲ್ಲಿ ಬೆಳಿಗ್ಗೆ ಬೇಗ ಆರಂಭವಾಗುವುದರಿಂದ ನಾವು ಬೇಗನೆ ಮಾಡುತ್ತೇವೆ. ಈಗಿನ ದಿನಗಳಲ್ಲಿ, ಶಿಕ್ಷಕರಾದ ನಾವು ಮುಂಜಾನೆ ಸಮಯದಲ್ಲಿ ಪ್ರತಿ ದಿನ 10 ನಿಮಿಷದಷ್ಟು ಸಮಯ ಲೈಟ್ ಚಾನಲಿಂಗ್ ಮಾಡಲು ಆರಂಭಿಸಿದ್ದೇವೆ. ಇದನ್ನು ಮಾಡುವುದರಿಂದ ನಾವು ತಾಜಾವಾಗಿರುತ್ತೇವೆ ಮತ್ತು ಪ್ರಶಾಂತವಾಗಿರುತ್ತೇವೆ ಮತ್ತು ಇದು ನಮ್ಮ ನೆನಪಿನ ಶಕ್ತಿಯನ್ನು ಉತ್ತಮಗೊಳಿಸುತ್ತದೆ. ನಾನು ಒತ್ತಡಗಳಿಂದ ವಿಮುಕ್ತಗೊಂಡಿದ್ದೇನೆ. ದಿನ ಪೂರ್ತಿ ನಾವೆಲ್ಲರು ಕಾರ್ಯನಿರತರಾಗಿರುತ್ತೇವೆ.

–ಮುಖ್ಯೋಪಾಧ್ಯಾಯಿನಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದೊಮ್ಮಸಂದ್ರ, ಆನೇಕಲ್ ತಾಲ್ಲೂಕು

ನಮ್ಮ ವಿದ್ಯಾರ್ಥಿಗಳಿಗೆ ಬೆಳಕಿನ ಶಕ್ತಿಯ ಮೂಲಕ ಚೈತನ್ಯದ ಬಗ್ಗೆ ಮತ್ತು ಏಳ್ಗೆಯ ಬಗ್ಗೆ ಅರಿವು ಮೂಡಿಸಿದ್ದಕ್ಕೆ ಇದರಿಂದ ವಿಧ್ಯಾರ್ಥಿಗಳ ಜೀವನದಲ್ಲಿ ಮತ್ತು ಅವರ ಭವಿಷ್ಯದಲ್ಲಿ ಕೂಡ ವಿಶೇಷ ಪರಿಣಾಮವಿರುವುದರಿಂದ ಆಡಳಿತ ಮಂಡಲಿ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಪರವಾಗಿ ನಾವು ನಿಮ್ಮ ಸಂಸ್ಥೆಯನ್ನು ಅಭಿನಂದಿಸುತ್ತೇವೆ.

–ಮಿಸ್ ಲಲಿತ ಟಿ.ಎ., ಮುಖ್ಯೋಪಾಧ್ಯಾಯಿನಿ, ಬೆಥಸ್ದ ಎನ್.ಟಿ.ಎಂ. ಶಾಲೆ, ಬೆಂಗಳೂರು

ನೀವು ನಮ್ಮ ಶಾಲೆಗೆ ಬಂದು ಏಳರಿಂದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಲೈಟ್ ಚಾನೆಲಿಂಗ್ ಕಲಿಸಿದ್ದಕ್ಕಾಗಿ ನಾವು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದು ಅವರ ನೆನಪಿನ ಶಕ್ತಿ ಮತ್ತು ಆರೋಗ್ಯವನ್ನು ಉತ್ತಮಗೊಳಿಸಲು ಸಹಾಯ ಮಾಡುತ್ತದೆ ಮತ್ತು ಶಾಂತಿಯನ್ನು ತರುತ್ತದೆ.

–ಶ್ರೀಮತಿ. ಸಾಧನ ಸುನೀಲ್ ಪರಬ್, ಮುಖ್ಯೋಪಾಧ್ಯಾಯಿನಿ, ಗಾಂಧಿ ಬಾಲ್‌ಮಂದಿರ್ ಹೈ ಸ್ಕೂಲ್, ಕುರ್ಲ, ಮುಂಬೈ

ಲೈಟ್ ಚಾನೆಲಿಂಗ್ ಕಾರ್ಯಕ್ರಮ ಅದ್ಭುತವಾಗಿದೆ. ವಿದ್ಯಾರ್ಥಿಗಳಿಗೆ ಒಳ್ಳೆ ಏಕಾಗ್ರತೆಯನ್ನು ಪಡೆಯುವುದಕ್ಕೆ ಸಹಾಯ ಮಾಡುತ್ತದೆ ಮತ್ತು ಸಕಾರಾತ್ಮಕ ಅಭಿವೃದ್ಧಿಹೊಂದಲು ಮಾನಸಿಕ ಸಮತೋಲನವನ್ನು ಕೊಡುತ್ತದೆ. ಸಿಬ್ಬಂದಿ ಸದಸ್ಯರಿಗೂ ಕೂಡ ಅದು ಬಹಳ ಸಹಾಯಕವಾಗಿದೆ. ನಮ್ಮ ಶಾಲೆಯ ಆಡಳಿತ ಮಂಡಲಿ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ ಮತ್ತು ಬೆಳಕಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಇಡೀ ವಿಶ್ವಕ್ಕೆ ಮತ್ತು ರಾಷ್ಟ್ರದ ಅಭಿವೃದ್ಧಿಗಾಗಿ ಇದು ಮುಂದುವರೆಯಲಿ ಎಂದು ನಾವು ಆಶಿಸುತ್ತೇವೆ.

–ಮಿಸ್ ರಜನಿ ಸಿ.ವಿ., ಮುಖ್ಯೋಪಾಧ್ಯಾಯಿನಿ, ಕೆ.ಕೆ.ವಿ. ಹೈ ಸ್ಕೂಲ್, ಬೆಂಗಳೂರು

ಪಿಡುಗಿನ ನಂತರ ಶಾಲೆಗೆ ಮರಳಿ ಬರುತ್ತಿರುವ ವಿದ್ಯಾರ್ಥಿಗಳಲ್ಲಿ ಸಮಾಧಾನವಿಲ್ಲ. ಈ ತಂತ್ರವು ಅವರಿಗೆ ಸರಾಗವಾಗಿರಲು ಸಹಾಯ ಮಾಡುತ್ತದೆ ಮತ್ತು ಸಹಜವಾಗಿರಲು ಸಹಾಯ ಮಾಡುತ್ತದೆಂದು ನನಗೆ ಅನಿಸುತ್ತದೆ.

–ಶೈಲಜ, ಸಂಯೋಜಕರು, ದಿ ಅಸೋಷಿಯೇಶನ್ ಆಫ್ ಪೀಪಲ್ ವಿಥ್ ಡಿಸಬಿಲಿಟಿ, ಲಿಂಗರಾಜಪುರಮ್ ಬೆಂಗಳೂರು

ಲೈಟ್ ಚಾನೆಲಿಂಗ್ ಸೆಷನ್ ನಂತರ ನಾನು ಪ್ರಶಾಂತವಾಗಿದ್ದೆ. ಯಾವುದೇ ಒತ್ತಡಗಳಿರಲಿಲ್ಲ. ನನ್ನ ಮನಸ್ಸು ಸರಾಗವಾಗಿತ್ತು.

–ನವನೀತ್ ಕೃಷ್ಣನ್, ಇಂಡಸ್ಟ್ರಿಯಲ್ ಟ್ರೈನಿಂಗ್ ಸ್ಟುಡೆಂಟ್, ಎ.ಪಿ.ಡಿ, ಲಿಂಗರಾಜಪುರಮ್, ಬೆಂಗಳೂರು

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಇದು, ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವುದಕ್ಕಾಗಿ ಆತ್ಮಪ್ರಜ್ಞೆಯಲ್ಲಿ ನಡೆಯುವ ಒಂದು ಸಂಚಲನ. ಭಾಷಣಗಳು, ಬಾವುಟಗಳಿಲ್ಲದ, ಬೆಳಕನ್ನು ಚಾನಲ್ ಮಾಡಿದರಷ್ಟೇ ಸಾಕಾಗುವ ಒಂದು ಸಂಚಲನ. ಪದಗಳು ಮಾಡಲಾಗದ ಎಲ್ಲವನ್ನೂ ಬೆಳಕೇ ಮಾಡುತ್ತದೆ.

ನಾವು ಚಾನಲ್ ಮಾಡಿ ಬೆಳಕನ್ನು ಹರಡಿದಾಗ, ಅದು ಬೇರೆಯವರ ಹೃದಯಗಳನ್ನು ಮತ್ತು ಮನೆಗಳನ್ನು ಪ್ರವೇಶಿಸುತ್ತದೆ ಮತ್ತು ಆಲೋಚನೆಗಳು ಮತ್ತು ಭಾವನೆಗಳಲ್ಲಿರುವ ಕತ್ತಲನ್ನು ಪರಿವರ್ತಿಸುತ್ತದೆ. ವ್ಯಕ್ತಿಗಳೊಂದಿಗೆ ಪ್ರಪಂಚವೂ ಪರಿವರ್ತನೆಗೊಳ್ಳುತ್ತದೆ.

ಇದು ಭೌತಿಕ ಬೆಳಕಲ್ಲ, ಆದರೆ ಇದು, ಯಾವುದರಿಂದ ಇಡೀ ಸೃಷ್ಟಿ ಬಂದಿದೆಯೋ ಆ ಅತಿ ಸೂಕ್ಷ್ಮ ಬೆಳಕು. ಈ ಬೆಳಕಿನಲ್ಲಿ ಎಲ್ಲವೂ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ, ಆದರೆ ಎಲ್ಲಾ ಕಡೆ ಇದೆ.

ನಾವು ಪ್ರತಿದಿನ ಎದ್ದಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ಚಾನಲ್ ಮಾಡಿ ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.

ಚಾನಲ್ ಮಾಡಿ ಬೆಳಕನ್ನು ಹರಡುವುದಕ್ಕಾಗಿ, ನಿಮ್ಮ ಮೇಲೆ ಬೆಳಕಿನ ಸಾಗರವೊಂದನ್ನು ಕಲ್ಪಿಸಿಕೊಳ್ಳಿ, ನಂತರ ಈ ಸಾಗರದಿಂದ ಬೆಳಕಿನ ದಪ್ಪ ಕಿರಣವೊಂದು ಕೆಳಬಂದಂತೆ ಕಲ್ಪಿಸಿಕೊಳ್ಳಿ, ಈ ಬೆಳಕು ನಿಮ್ಮನ್ನು ಪ್ರವೇಶಿಸಿ ನಿಮ್ಮ ದೇಹವನ್ನು ಸಂಪೂರ್ಣವಾಗಿ ತುಂಬುತ್ತಿದೆಯೆಂದು ಕಲ್ಪಿಸಿಕೊಳ್ಳಿ, ಒಂದು ನಿಮಿಷ ಈ ಬೆಳಕನ್ನು ಅನುಭವಿಸಿ. ನಂತರ ಈ ಬೆಳಕು ನಿಮ್ಮ ದೇಹದಿಂದ ಹೊರಬಂದು ನಿಧಾನವಾಗಿ ಸುತ್ತಲೂ ಹರಡುತ್ತಾ, ನಿಮ್ಮ ಮನೆ, ಪ್ರದೇಶ, ದೇಶ ಮತ್ತು ಇಡೀ ಪ್ರಪಂಚವನ್ನು ತುಂಬುತ್ತಿದೆ ಎಂದು ಕಲ್ಪಿಸಿಕೊಳ್ಳಿ.

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರವರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಎಲ್ಲರಿಗೂ ಹರಡಿ.

www.lightchannels.comಗೆ ಭೇಟಿ ನೀಡಿ.

### ಶಂಬಲದ ನಿಯಮಗಳು

**ಈ ಏಳು ನಿಯಮಗಳನ್ನು ಶಂಬಲದಲ್ಲಿ ವಾಸಿಸುತ್ತಿರುವ ಜನರು ಅಭ್ಯಾಸ ಮಾಡುತ್ತಾರೆ. ಅವರು ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವನದಲ್ಲಿಯೇ ಬದುಕುತ್ತಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ನಂತರ ಅವುಗಳನ್ನು ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ನಕಾರಾತ್ಮಕತೆಗಳನ್ನು ಗೆಲ್ಲಲು ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಸಿದ್ಧಗೊಳಿಸುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

**ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು**
**ಸಂ: ಶೋಭಾ ಕೆ. ರಾವ್; ಅನು: ಸುಜಾತ ವಿ**

ಸೆಪ್ಟೆಂಬರ್ 2006

ಸಂಪ್ರದಾಯ ಒಂದು ಅದ್ಭುತವಾದ ವಿಷಯ. ಈ ವಿಷಯಗಳನ್ನು ನಾವು ತಿರಸ್ಕರಿಸಲಾಗುವುದಿಲ್ಲ. ಅನೇಕ ಅರ್ಥವಿಲ್ಲದ ವಿಷಯಗಳು ಕೂಡ ಸಂಪ್ರದಾಯದ ಭಾಗವಾಗಿವೆ. ಈ ಭಾಗವನ್ನು ನಾವು ಈಗ ಅರ್ಥ ಮಾಡಿಕೊಳ್ಳುತ್ತಿದ್ದೇವೆ; ನಮ್ಮ ಸಾಮಾನ್ಯ ತಿಳುವಳಿಕೆ ನಮಗೆ ಹೇಳುತ್ತದೆ, ಮತ್ತು ಆ ಅರ್ಥವಿಲ್ಲದ ವಿಷಯಗಳನ್ನು ಹೊರಗೆ ಎಸೆಯಲು ನಮಗೆ ಸಾಧ್ಯವಾಗಿದೆ. ಇದು ನಮ್ಮಿಂದ ಸಾಧ್ಯವಾಗಿರುವುದಕ್ಕೆ ಹೊಸ ಅರಿವು ಮೂಡಿರುವುದೇ ಕಾರಣ. ಈ ಅರಿವು ಬೆಳೆಯುತ್ತಿರುವ ವಾಸ್ತವ. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು. 1988ರಲ್ಲಿ, ನಾನು ಮೊದಲ ಧ್ಯಾನದ ತರಗತಿಯನ್ನು ಶುರು ಮಾಡಿದಾಗ, ಈ ಆರಂಭಿಕ ಹೇಳಿಕೆಯೊಂದಿಗೆ ಶುರು ಮಾಡಬೇಕಾಯಿತು, “ನಾನು ಋಷಿಗಳ ಪರಂಪರೆಗೆ ಸೇರಿದವನು. ನನಗೆ, ಅವರು ವಾಸ್ತವವಾಗಿದ್ದಾರೆ ಮತ್ತು ನೀವು ಅವರನ್ನು ಒಪ್ಪಿಕೊಳ್ಳಬೇಕಾಗಿಲ್ಲ.” ಇಲ್ಲವಾದರೆ ಆ ಧ್ಯಾನದ ತರಗತಿಯ ನಂತರ, ಜನರು ಅವರ ಬಗ್ಗೆ ಪ್ರಶ್ನೆ ಕೇಳಬಹುದು, ಮಾತನಾಡಬಹುದು ಮತ್ತು ಅವರ ಬಗ್ಗೆ ನಗಬಹುದೆಂದು ಸ್ವಲ್ಪ ಸಮಯದ ನಂತರ ಯೋಚಿಸಿದೆ. ಆಶ್ಚರ್ಯಕರವಾಗಿ, ಯಾರೂ ಹಾಗೆ ಮಾಡಲಿಲ್ಲ. ಕೆಲವರು ಕೂಡಲೇ ಋಷಿಗಳ ಇರುವಿಕೆಯನ್ನು ಒಪ್ಪಿಕೊಂಡಿರುವುದಿಲ್ಲ. ಆದರೆ ಕ್ರಮೇಣ ಹೇಗೋ, ಜನರು ಋಷಿಗಳು ಇಲ್ಲಿ ಇದ್ದಾರೆಂದು ಒಪ್ಪಿಕೊಂಡಿದ್ದಾರೆ. ಇಂಟರ್ನೆಟ್‌ಗೆ ಧನ್ಯವಾದಗಳು. ಈ ಜ್ಯೋತಿಕಾರ್ಯದಲ್ಲಿ ಬಹಳ ಜನರು ತೊಡಗಿಕೊಂಡಿರುವುದನ್ನು ಈಗ ನೀವು ನೋಡಬಹುದು, ಅವರು ಸೂಕ್ಷ್ಮ ಲೋಕದ ಜನರೊಂದಿಗೆ ಸಂಪರ್ಕದಲ್ಲಿ ಇರುತ್ತಾರೆ. ಅವರನ್ನು ನಾವು ಋಷಿಗಳೆಂದು, ಜ್ಯೋತಿಜೀವಿಗಳೆಂದು (Light beings) ಅಥವಾ ದೇವದೂತರೆಂದು (angels) ಕರೆಯಬಹುದು. ಆದರೆ ಈ ವ್ಯಕ್ತಿಗಳು ಇದ್ದಾರೆ. ಇದೆಲ್ಲಾ ಈ ಹೊಸ ಅರಿವಿನಿಂದ ಸಾಧ್ಯವಾಗಿದೆ.

ಮಾಧ್ಯಮ, ಮುದ್ರಣ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮದವರು ಕೂಡ, ಭಾವೋದ್ವೇಗದ ವಿಷಯಗಳ ಹಿಂದೆ ಸಹಜವಾಗಿ ಹೋಗುತ್ತಾರೆ. ಇದು ಸಹಜ ಏಕೆಂದರೆ ಅವರು ಬದುಕಬೇಕು. ಮಾಧ್ಯಮಗಳಿಗೆ, ಆಕರ್ಷಣೆ, ಭಾವೋದ್ವೇಗಗಳು, ಸಹಜ ಎನ್ನುವಂತೆ ಕಾಣಿಸುತ್ತವೆ. ನಾವು ಅದನ್ನು ಒಪ್ಪಿಕೊಂಡು, ಸಂತೋಷ ಪಡುತ್ತೇವೆ. ವಿಷಯವೇನೆಂದರೆ, ಭೂಮಿಯ ಮೇಲೆ ಇನ್ನೂ ಅನೇಕ ಬೇರೆ ವಿಷಯಗಳನ್ನು ತಿಳಿದುಕೊಳ್ಳಲು ಮತ್ತು ಕಂಡು ಹಿಡಿಯಲು ಅವರಿಗೆ ಸಮಯ ಮತ್ತು ತಾಳ್ಮೆ ಇರುವುದಿಲ್ಲ. ಅನೇಕ ಅದ್ಭುತ ವಿಷಯಗಳು ನಡೆಯುತ್ತಿವೆ, ಅವು ಕೂಡ ವಾರ್ತೆಗಳ ಒಂದು ಭಾಗವಾಗಬೇಕು. ಅದನ್ನು ಕೂಡ ಪ್ರಪಂಚಕ್ಕೆ ಪ್ರಸ್ತುತ ಪಡಿಸಬೇಕು, ಆದರೆ ಅದೇಕೋ, ಅವುಗಳನ್ನೆಲ್ಲಾ ನಿರ್ಲಕ್ಷಿಸಿದ್ದಾರೆ. ಈ ವಿಷಯಗಳು ಮನಮೋಹಕವಾಗಿರುವುದಿಲ್ಲ, ಭಾವೋದ್ರೇಕಗೊಳಿಸುವುದಿಲ್ಲ. ಈ ಘಟನೆಗಳು ಏನೆಂದು ನಮಗೆ ಗೊತ್ತು. ಈ ಘಟನೆಗಳಲ್ಲಿ ಜ್ಯೋತಿಕಾರ್ಯಗಳು, ಜ್ಯೋತಿಜೀವಿಗಳು, ಸೂಕ್ಷ್ಮ ಲೋಕಗಳು ಒಳಗೊಂಡಿವೆ. ಈ ಜ್ಞಾನವು ಭಾರಿ ಪ್ರಭಾವ ಬೀರುವುದರಿಂದ ಅವುಗಳು ಬಹಳ ಮುಖ್ಯವಾಗಿವೆ. ನಮ್ಮ ದೈನಂದಿನ ಜೀವನದಲ್ಲಿ ಅದು ಪ್ರಭಾವ ಬೀರುವುದರಿಂದ ಅದು ಮುಖ್ಯ. ಆದರೆ ಸದ್ಯಕ್ಕೆ ಮಾಧ್ಯಮದವರು ಇದನ್ನು ನಿರ್ಲಕ್ಷಿಸುತ್ತಿದ್ದಾರೆ. ಹಾಗಾಗಿ, ಈ ಜ್ಞಾನವನ್ನು ಹರಡುವುದಕ್ಕೆ ಏನು ಮಾಡಬೇಕು. ಅದೃಷ್ಟವಶಾತ್ ಬೇರೆದಾರಿ ಇದೆ – ಅಂತರ್ಜಾಲ. ಪುಸ್ತಕಗಳನ್ನು ಪ್ರಕಟಿಸುವುದೂ ಒಂದು ಆಯ್ಕೆ, ಆದರೆ ಪುಸ್ತಕವನ್ನು ಹೆಚ್ಚು ಮಂದಿ ಓದುವುದಿಲ್ಲ. ಅಂತರ್ಜಾಲವಿದೆ, ಮನುಕುಲಕ್ಕೆ ಭಾರಿ ಉಡುಗೊರೆಯಾಗಿರುವ ಅಂತರ್ಜಾಲ ನಮಗೆ ಇದೆ. ನಮಗೆ ಆ ಆಯ್ಕೆ ಇದೆ, ಅಂತರ್ಜಾಲದ ಕಾರಣದಿಂದಾಗಿಯೇ, ಹೆಚ್ಚು ಜನರಿಗೆ ಈ ವಿಷಯಗಳ ಬಗ್ಗೆ ತಿಳಿಯುತ್ತಿದೆ. ಆದರೆ ಇನ್ನೊಂದು ಮಾರ್ಗವಿದೆ ಎಂದು ಋಷಿಗಳು ನಮಗೆ ಹೇಳುತ್ತಾರೆ. ಅವರು ಹೇಳುತ್ತಾರೆ, ಅತಿ ವೇಗವಾದ ಮತ್ತು ಬಹಳ ಸಮರ್ಥವಾದ ಇನ್ನೊಂದು ಮಾರ್ಗವೆಂದರೆ, ‘ಸೂಕ್ಷ್ಮ ಸಂವಹನ’ (Astral communication). ಸೂಕ್ಷ್ಮ ಮಟ್ಟದಲ್ಲಿ, ನಾವು ಈ ಜ್ಞಾನವನ್ನು ಹರಡಬಹುದು. ಸೂಕ್ಷ್ಮ ಮಟ್ಟದಲ್ಲಿ ಕೊಟ್ಟ ಈ ಜ್ಞಾನ ಎಲ್ಲರಿಗೂ ಕೂಡಲೇ ಅರ್ಥವಾಗದೆ ಇರಬಹುದು. ಅದರಿಂದ ತೊಂದರೆ ಇಲ್ಲ; ಅದು ಮನಸ್ಸಿನ ಆಳದಲ್ಲಿ ನಾಟಿರುತ್ತದೆ ಮತ್ತು ಅದು ನಮಗೆ ಚೆನ್ನಾಗಿ ಗೊತ್ತಿರುತ್ತದೆ, ಮತ್ತು ಇದ್ದಕ್ಕಿದ್ದಂತೆ ಸಂದರ್ಭ ಬಂದಾಗ ಅವರು ಇವುಗಳನ್ನು ಒಪ್ಪಿಕೊಳ್ಳುತ್ತಾರೆ. ಜನರಿಗೆ ಇದನ್ನು ಅರ್ಥ ಮಾಡಿಕೊಳ್ಳಲು ಹಾಗೂ ಒಪ್ಪಿಕೊಳ್ಳಲು ಸುಲಭವಾಗುತ್ತದೆ. ಹಾಗಾಗಿ, ಸೂಕ್ಷ್ಮ ಮಟ್ಟದಲ್ಲಿ, ನಾವು ಈ ಜ್ಞಾನವನ್ನು ಮತ್ತು ಈ ಸತ್ಯಗಳನ್ನು ಹರಡುತ್ತಾ ಹೋಗಬೇಕು.

ಕೆಲವೊಮ್ಮೆ, ಜನರಿಂದ ವಿಚಿತ್ರವಾದ ಬೇಡಿಕೆಗಳು ಬರುತ್ತವೆ. ನಾನು ಅವರನ್ನು ಭೇಟಿ ಮಾಡುವುದು ಸತ್ಯದ ಬಗ್ಗೆ ವಿವರಿಸುವುದಕ್ಕೆ ಹಾಗೂ ಧ್ಯಾನ ಮತ್ತು ಸಾಧನೆಯ ಬಗೆಗಿನ ಪ್ರಾಮಾಣಿಕ ಪ್ರಶ್ನೆಗಳನ್ನು ಉತ್ತರಿಸಲು. ಕೆಲವೊಮ್ಮೆ, ಮೋಜಿನ ಸನ್ನಿವೇಶಗಳಿರುತ್ತದೆ ಮತ್ತು ಕೆಲವೊಮ್ಮೆ ಬಹಳ ಎಡವಟ್ಟಾದ ಬೇಡಿಕೆಗಳಿರುತ್ತವೆ. ಒಮ್ಮೆ, ವ್ಯಕ್ತಿಯೊಬ್ಬರು 24 ಗಂಟೆಗಳ ಕಾಲ ಎಡೆಬಿಡದೆ ನನ್ನ ಜೊತೆ ಇರಲು ಬಯಸಿದರು. ಇದರಿಂದ ಅವರಿಗೆ ಏನೂ ಸಹಾಯವಾಗುವುದಿಲ್ಲ. ಅದು ನನ್ನನ್ನು ಮುಜುಗರಕ್ಕೆ ಸಿಲುಕಿಸುತ್ತದೆ ಮತ್ತು ಬಹುಶ: ಅವರಿಗೂ ಕೂಡ. ನಿಧಾನವಾಗಿ, ಸಾಧ್ಯವಾದಷ್ಟೂ ನೋವಾಗದಂತೆ, ಈ ತರದ ಮೌಢ್ಯಗಳನ್ನು ನಾವು ತೆಗೆದು ಹಾಕಬೇಕು. ಬಹಳ ದೂರದಿಂದ ಜನರು ಬಂದು ಈ ರೀತಿ ಹೇಳಿದಾಗ ನನಗೆ ಬೇಸರವಾಗುತ್ತದೆ, “ನಾನು ನಿಮ್ಮನ್ನು ಭೇಟಿ ಮಾಡಬೇಕು ಅಷ್ಟೆ. ನಿಮ್ಮ ದರ್ಶನ ನನಗೆ ಸಾಕು”. ನಾವು ಅಲ್ಲಿಂದ ಮುಂದೆ ಹೋಗಬೇಕು. ಇಲ್ಲಿ ನೀಡಲು ನಮ್ಮಲ್ಲಿ ನಿಧಿಯೇ ಇದೆ. ಜನರಿಗೆ ಇದನ್ನು ತೆಗೆದುಕೊಂಡು ಹೋಗಬಹುದೆಂದು ತಿಳಿದಿಲ್ಲ. ಮತ್ತು ಕೇವಲ ದರ್ಶನ, ಒಂದು ಪ್ರಚೋದಿಸುವ ಅಂಶವಾಗಬಹುದು, ನಾನು ಇದನ್ನು ಪೂರ್ತಿಯಾಗಿ ಒಪ್ಪಿಕೊಳ್ಳುತ್ತೇನೆ, ಆದರೆ ನಾವು ಅವರಿಗೆ ಹೆಚ್ಚು ಹೆಚ್ಚು ಶಿಕ್ಷಣ ನೀಡಬೇಕು. ಅದೇ ವ್ಯಕ್ತಿಯಿಂದ ಬಂದ ಮನವಿಯನ್ನು ಒಪ್ಪಿಕೊಳ್ಳಬೇಕಾಯಿತು. ಅವರು ಒಂದು ವಾರ ಇಲ್ಲಿದ್ದಾಗ ನಾವು ಗಂಟೆಗಳ ಕಾಲ ಮಾತನಾಡಿದೆವು. ವಿಷಯವೇನೆಂದರೆ, ನಾವು ಇಲ್ಲಿಗೇ ನಿಲ್ಲಿಸಬಾರದು. ನಾವು ಇನ್ನೂ ಮುಂದಕ್ಕೆ ಹೋಗಬೇಕು, ಧ್ಯಾನವನ್ನು ಮಾಡಬೇಕು, ಜ್ಞಾನವನ್ನು ಪಡೆಯಬೇಕು, ಬೆಳೆಯಬೇಕು, ಇತ್ಯಾದಿ. ಮೂರು ವರ್ಷ ಕಳೆದವು ಈಗ ಆ ವ್ಯಕ್ತಿ ಹೇಳುತ್ತಾರೆ, “ನೀವು ನನ್ನಲ್ಲಿ ನಂಬಿಕೆಯನ್ನು ಸೃಷ್ಟಿಸಬೇಕು!” ಇದು ಬಹಳ ತಮಾಷೆಯಾಗಿದೆ! ನಾನು ನೇರವಾಗಿ ಹೇಳಿದೆ, “ನಾನು ಯಾರಲ್ಲೂ ನಂಬಿಕೆಯನ್ನು ಸೃಷ್ಟಿಸುವುದಿಲ್ಲ. ಅದು ನನ್ನ ಕೆಲಸವಲ್ಲ. ನಿಮಗೆ ನಂಬಿಕೆ ಇದ್ದರೆ, ಇಲ್ಲಿ ಇರಬಹುದು, ನಿಮಗೆ ನಂಬಿಕೆ ಇಲ್ಲದಿದ್ದರೆ ನೀವು ಹೋಗಬಹುದು.” ಬಹಳ ಸಮಯಗಳಲ್ಲಿ, ನಾವು ಈ ರೀತಿ ಒರಟಾಗಿ ಮಾತನಾಡಬೇಕಾಗುತ್ತದೆ!

ನಾನು ನಿಮಗೆ ತುಂಬಾ ವಿನೋದಮಯವಾಗಿರುವ ವಿಷಯಗಳನ್ನು ಹೇಳಬಹುದು. ವಿಷಯವೇನೆಂದರೆ ನಾವು ಒಂದು ಘಟ್ಟದಿಂದ ಮುಂದೆ ಸಾಗಬೇಕು. ನಯವನ್ನು ಬದಿಗಿಟ್ಟು ವಿಷಯಗಳನ್ನು ನೇರವಾಗಿ ಮತ್ತು ಮೊಂಡಾಗಿ ಹೇಳುವ ಸಮಯ ನಮಗೆ ಬಂದಿದೆ.

ಎರಡು ಗ್ರಹಣಗಳ ನಂತರ ಮತ್ತು ಯಾವ ಬದಲಾವಣೆಗಳು ಸಂಭವಿಸುತ್ತವೆ ಎಂದು ತಿಳಿದ ನಂತರ, ಕಾರ್ಯನಿರತರಾಗಿ ಮುಂದೆ ಹೋಗುವ ಸಮಯ ಬಂದಿದೆ. ಪರಿವರ್ತನೆ ಕಾಲದಲ್ಲಿದ್ದೇವೆ, ಪ್ರಳಯದ ಕಾಲದಲ್ಲಿದ್ದೇವೆ. ನಾವು ಎಷ್ಟು ಸಮಯ ಖುಷಿಪಡಿಸುತ್ತಾ ಮತ್ತು ಆಟವಾಡುತ್ತಾ ಇರಬಹುದು? ಈ ಒಂದು ಅಂಶವನ್ನೇ ನಾನು ತಿಳಿಸಲು ಪ್ರಯತ್ನಿಸುತ್ತಿರುವುದು. ಬೆಳೆಯುವುದಕ್ಕೆ, ಮೇಲೇಳುವುದಕ್ಕೆ ನಾವು ಅವಕಾಶಗಳನ್ನು ಒದಗಿಸುತ್ತಿದ್ದೇವೆ, ಆದರೆ ಅವುಗಳನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಬಹುಶಃ ನಾನು ತುಂಬಾ ಮಹತ್ವಾಕಾಂಕ್ಷಿಯಾಗಿದ್ದು ತುಂಬಾ ನಿರೀಕ್ಷಿಸುತ್ತೇನೇನೋ. ಆದರೆ ಎಲ್ಲರಿಂದಲೂ ತುಂಬಾ ನಿರೀಕ್ಷಿಸುವುದೇ ಗುರುವಿನ ಕಾರ್ಯ. ಜನರಿಗೆ ಸಾಧನೆಯನ್ನು ಅರ್ಥಮಾಡಿಸುವುದು ಮತ್ತು ಅದರಲ್ಲಿ ಗಂಭೀರತೆಯನ್ನು ತರುವುದೇ ಇದರ ಉದ್ದೇಶ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

**ಸಂ: ಶೋಭಾ ಕೆ. ರಾವ್; ಅನು: ಕಾಂಚನಲತಾ**

29–08–2021

ನಾವು ಅಮರ ಮಹರ್ಷಿಯವರನ್ನು ನೆನಪಿಸಿಕೊಂಡಾಗಲೆಲ್ಲಾ, ಅಮರ ಮಹರ್ಷಿ ಅವರೊಂದಿಗೆ, ಈ ಬೆಚ್ಚನೆಯ ಭಾವ, ಅನನ್ಯವಾದ ಸಾಮೀಪ್ಯ ಹಾಗೂ ಅನ್ಯೋನ್ಯತೆಯ ಅನುಭವವಾಗುತ್ತದೆ. ನಾವು ಅವರನ್ನು ಭೇಟಿ ಆಗಿಲ್ಲ ಆದರೂ ನಮಗೆ ಈ ಭಾವನೆ ಇದೆ. ಯಾವುದೇ ಸಮಯದಲ್ಲಿ ನಾವು ಅವರ ಬಳಿ ಮನಸ್ಸನ್ನು ತೆರೆದುಕೊಳ್ಳಬಹುದಾದ, ಹೃದಯಕ್ಕೆ ತೃಪ್ತಿಯಾಗುವಷ್ಟು ಹೇಳಿಕೊಳ್ಳಬಹುದಾದ ಒಬ್ಬ ವ್ಯಕ್ತಿ ಅವರು. ಅವರು ನಮ್ಮನ್ನು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ಸಹಾಯ ಮಾಡುತ್ತಾರೆ ಹಾಗೂ ನಮ್ಮನ್ನು ತೊಂದರೆಗಳಿಂದ ಹೊರ ತರುತ್ತಾರೆ ಎಂಬ ನಂಬಿಕೆ ಅದು ಹೇಗೋ ನಮ್ಮಲ್ಲಿ ಇದೆ. ಇದು ನಮ್ಮ ಅನುಭವವಾಗಿದೆ.

ನಮಗೆ ಅಮರ ಮಹರ್ಷಿಯವರೊಂದಿಗೆ ಈ ರೀತಿಯ ಸಾಮೀಪ್ಯ, ಅನ್ಯೋನ್ಯತೆಯ ಭಾವ ಇರುವುದು ಹೇಗೆ ಸಾಧ್ಯ ಎಂದು ಅಚ್ಚರಿಗೊಳ್ಳುತ್ತಿದ್ದೆ. ಇದು ಖಂಡಿತವಾಗಿ ಅವರಿಗೆ ನಮ್ಮ ಬಗ್ಗೆ ಇರುವ ಪ್ರೀತಿಯೇ ಆಗಿರಬೇಕು. ನಾವು ಹಲವಾರು ಜನ್ಮಗಳು ಒಟ್ಟಿಗೆ ಇದ್ದೆವು, ಆ ಹಳೆಯ ಸಂಪರ್ಕ ಇರುವ ಸಾಧ್ಯತೆಯೂ ಇದೆ. ನಾವು ಅವರಿಗೆ ಅಷ್ಟು ಸಮೀಪ ಇರುವಂತೆ ಭಾವಿಸುವುದು ಏಕೆಂದರೆ ಅವರು ದೇವರನ್ನು ಪ್ರತಿನಿಧಿಸುತ್ತಾರೆ. ಅವರು ಒಂದು ದ್ವಾರ, ದೇವರ ಬಳಿ ಹೋಗಲು ಇರುವ ಒಂದು ದ್ವಾರ. ದ್ವಾರವೂ ಕೂಡ ದೇವರು ಎಂದು ನನಗೆ ಅನಿಸುತ್ತದೆ. ಎಷ್ಟೇ ಆದರೂ, ಕೇವಲ ದೇವರು ಮಾತ್ರ ದ್ವಾರದ ಮೂಲಕ ಕಾರ್ಯ ನಿರ್ವಹಿಸುತ್ತಾನೆ. ದ್ವಾರವಿಲ್ಲದೇ ನಾವು ದೇವರನ್ನು ತಲುಪುವುದು ಹೇಗೆ?

ಆದ್ದರಿಂದ ಅವರು ಒಂದು ದ್ವಾರ; ಅವರು ದೇವರ ಹಾಗೆ; ಅವರು ದೇವರು. ಆದುದರಿಂದಲೇ ನಾವು ಅವರಿಗೆ ಅಷ್ಟು ಸಮೀಪವಿರುವಂತೆ ಭಾವಿಸುತ್ತೇವೆ.

ಮಹರ್ಷಿ ಅವರರವರು ಸತ್ಯ. ಮತ್ತು ಸತ್ಯವು ನಿರಂತರವಾದುದು (eternal) ಎಂದು ಗುರೂಜಿಯವರು ಹೇಳಿದ್ದರು. ಅವರು ಕೇವಲ ನಿರಂತರವಲ್ಲ, ಅವರು ಒಂದು ನಿರಂತರವಾದ ಭರವಸೆ ಎಂದು ಗುರೂಜಿಯವರು ಹೇಳಿದ್ದರು. ಎಲ್ಲಿ ಭರವಸೆ ಇರಲು ಸಾಧ್ಯವಿಲ್ಲವೋ ಅಲ್ಲಿಯೂ ಮಹರ್ಷಿ ಅಮರರವರು ಒಂದು ಭರವಸೆ. ಇದನ್ನು ನಾನು ಸ್ವತಃ ಅನುಭವಿಸಿದ್ದೇನೆ. ಹತಾಶೆಯಿಂದ ಹೊರಬಂದ ಜನರನ್ನು ನಾನು ನೋಡಿದ್ದೇನೆ. ಅವರ ಅನುಗ್ರಹವಿಲ್ಲದಿದ್ದರೆ ಇದು ಸಾಧ್ಯವಿಲ್ಲ. ಜನರು ನನಗೆ ಹೇಳಿದಾಗ, ಅವರು ಸಂಕಟದಲ್ಲಿರುವಾಗ ನನಗೆ ಕರೆ ಮಾಡಿದಾಗ, ನಾನು ಅವರಿಗೆ ಇದನ್ನೇ ಹೇಳುತ್ತೇನೆ ಏಕೆಂದರೆ ಅದನ್ನು ನಾನು ನೋಡಿದ್ದೇನೆ. ನಾನು ಅದರ ಅನುಭವ ಪಡೆದಿದ್ದೇನೆ ಮತ್ತು ನಾನು ಅವರಿಗೆ ವಿಶ್ವಾಸದಿಂದ ಹೇಳುತ್ತೇನೆ, "ಚಿಂತೆ ಮಾಡಬೇಡಿ, ಪರಿಸ್ಥಿತಿಯು ಸುಧಾರಿಸುತ್ತದೆ ಏಕೆಂದರೆ ನಮ್ಮೊಂದಿಗೆ ಮಹರ್ಷಿ ಅಮರರವರು ಇದ್ದಾರೆ."

ಸುಧಾಕರ್ ಸರ್ ಅವರು, ಒಬ್ಬ ಧ್ಯಾನಿಯು ಮಹರ್ಷಿ ಅಮರರವರು ಓರಿಯೆಂಟೇಶನ್ ತರಗತಿಯನ್ನು ನಡೆಸುತ್ತಿದ್ದುದನ್ನು ನೋಡಿದ ಅನುಭವವನ್ನು ವರ್ಣಿಸಿದರು. ಹಾಗೂ ಈ ವರ್ಷದ ಓರಿಯೆಂಟೇಶನ್ ತರಗತಿಯು ವಿಶಿಷ್ಟವಾಗಿದ್ದಿತು. ವಾಸ್ತವದಲ್ಲಿ ಪ್ರತಿ ವರ್ಷ ಈ ತರಗತಿಯು ವಿಶಿಷ್ಟವಾಗಿರುತ್ತದೆ ಮತ್ತು ಪ್ರತಿ ವರ್ಷವೂ ನಾವು ಈ ವರ್ಷದ ತರಗತಿಯು ವಿಶಿಷ್ಟವಾಗಿತ್ತು ಎಂದು ಹೇಳುತ್ತೇವೆ. ತರಗತಿಯ ನಂತರ ಅದ್ಭುತವಾದ ಬದಲಾವಣೆಯ ಅನುಭವವಾಯಿತು ಎಂದು ಜನರು ನನಗೆ ಹೇಳಿದರು. ಒಬ್ಬ ವ್ಯಕ್ತಿಯು, "ಯಾವುದೋ ಒಂದು ದೊಡ್ಡ ಭಾರವನ್ನು ಇಳಿಸಿದ ಹಾಗೆ ಇತ್ತು ಮತ್ತು ನನಗೆ ಕೇವಲ ಹಗುರಗೊಂಡ ಅನುಭವ ಮಾತ್ರವಲ್ಲ, ಜೀವನಕ್ಕೆ ಒಂದು ಹೊಸ ಅರ್ಥವೂ ಮೂಡಿದೆ" ಎಂದು ಹೇಳಿದರು. ಈ ರೀತಿಯಲ್ಲಿ ನಾವು ಜಾಗೃತಗೊಳ್ಳುತ್ತೇವೆ, ಆದರೆ ಕ್ರಮೇಣವಾಗಿ, ಎಂದು ನನಗೆ ಅನಿಸುತ್ತದೆ. ಇಲ್ಲಿ ಶಾಂತಿ ಇದೆ, ನನ್ನೊಳಗೆ ಶಾಂತಿ ಇದೆ ಎಂದು ಆಕೆ ಹೇಳಿದರು. ಅಂತಹ ಸಂಗತಿಗಳು ಸಾಧ್ಯವಾಗುವುದು ಕೇವಲ ಮಹರ್ಷಿ ಅಮರ ಅವರ ಅನುಗ್ರಹದಿಂದ.

ಮಹರ್ಷಿ ಅಮರರವರ ಶ್ರೇಷ್ಠತೆ, ಅವರ ದೊಡ್ಡತನ, ಅಗಾಧತೆ, ಅವರ ಸಾಮರ್ಥ್ಯಗಳು, ಹಲವಾರು ಕೆಲಸಗಳನ್ನು ಮಾಡುವ ಸಾಮರ್ಥ್ಯಗಳು, ಅವರ ನಮ್ರತೆ, ಹೃದಯ ವೈಶಾಲ್ಯತೆ, ವಿವಿಧ ಸಂಗೀತ ಉಪಕರಣಗಳ ಮೇಲಿರುವ ಪಾಂಡಿತ್ಯ, ಹಾಡುಗಾರಿಕೆಯಲ್ಲಿರುವ ಅವರ ಪಾಂಡಿತ್ಯ ನಮ್ಮನ್ನು ಸದಾ ಒಂದು ರೀತಿಯಲ್ಲಿ ಬೆರಗುಗೊಳಿಸುತ್ತವೆ. ಅವರು ಒಂದು ನಿರ್ದಿಷ್ಟ ರಾಗವನ್ನು ಹಾಡಿದಾಗ, ಮಳೆ ಸುರಿಯಲು ಆರಂಭವಾಯಿತಂತೆ. ಅವರ ಪರಿಷ್ಕೃತ ಮಾನವೀಯತೆ ಹಾಗೂ ಇನ್ನೂ ಹೆಚ್ಚು ವಿಷಯಗಳು ನಮ್ಮನ್ನು ಬೆರಗುಗೊಳಿಸುತ್ತವೆ. ಅವರ ವ್ಯಕ್ತಿತ್ವವನ್ನು ವರ್ಣಿಸಲು ಪದಗಳು ಸಾಲದು. ನಾವು ಅವರನ್ನು ಸಂಪೂರ್ಣವಾಗಿ ಪ್ರಕಟಪಡಿಸಲು ಪ್ರಯಾಸಪಡುತ್ತಿದ್ದರೂ, ಅವರು ನಮ್ಮಲ್ಲಿ ಜೀವಿಸುವುದನ್ನು ಮುಂದುವರೆಸಿದ್ದಾರೆ. ನಾನು ಇದನ್ನು ನಂಬುತ್ತೇನೆ ಏಕೆಂದರೆ ಇದನ್ನು ನಮಗೆ ಗುರೂಜಿಯವರು ಹೇಳಿದ್ದಾರೆ ಮತ್ತು ಗುರೂಜಿಯವರ ಮಾತುಗಳು ವೇದವಾಕ್ಯಗಳು ಎಂಬುದು ನಮಗೆಲ್ಲಾ ತಿಳಿದಿದೆ. ಮಹರ್ಷಿ ಅಮರರವರು ನಮ್ಮೊಳಗೆ ಜೀವಿಸಿದ್ದಾರೆ. ಗುರೂಜಿ ಒಮ್ಮೆ ಹೇಳಿದ್ದರು, "ನಾವು ಅವರನ್ನು ನಮ್ಮ ಜೀವನದಿಂದ ತೆಗೆದುಹಾಕಿದರೆ, ನಾವು ಕೇವಲ ಸೊನ್ನೆ." ನಾವು ಮಹರ್ಷಿ ಅಮರರವರನ್ನು ನಮ್ಮ ಬದುಕಿನಿಂದ ತೆಗೆದುಹಾಕಿದರೆ, ನಾವು ತೀರಾ ಸಾಮಾನ್ಯ ವ್ಯಕ್ತಿಗಳಾಗುತ್ತೇವೆ. ಅವರು ನಮ್ಮ ಬದುಕಿನಲ್ಲಿದ್ದರೆ, ನಾವು ಹೊಳೆಯುತ್ತೇವೆ, ಅವರ ಬೆಳಕಿನಿಂದ ಹೊಳೆಯುತ್ತೇವೆ ಏಕೆಂದರೆ ಅವರು ನಮ್ಮೊಳಗೆ ಜೀವಿಸುತ್ತಿದ್ದಾರೆ. ನಮ್ಮಲ್ಲಿ ಕೆಲವರು ಒಂದು ನಿರ್ದಿಷ್ಟ ಮಟ್ಟದಲ್ಲಿ ಹೊಳೆಯುತ್ತಿರಬಹುದು, ಕೆಲವರು ಹೆಚ್ಚು ಕಾಂತಿಯಿಂದ ಹೊಳೆಯುತ್ತಿರಬಹುದು, ಕೆಲವರು ಇನ್ನೂ ಹೆಚ್ಚಿನ ಕಾಂತಿಯಿಂದ ಹೊಳೆಯುತ್ತಿರಬಹುದು, ಪರವಾಗಿಲ್ಲ. ಬಹಳ ದೂರ ಇಲ್ಲದ ನವ ಯುಗದಲ್ಲಿ ನಾವು ಸಂಪೂರ್ಣವಾದ ಕಾಂತಿಯಿಂದ ಅವರ ಬೆಳಕಿನಿಂದ ಹೊಳೆಯುತ್ತೇವೆ.

ಗುರೂಜಿಯವರು ಹೇಳಿದ್ದ ಇನ್ನೊಂದು ಅಂಶವನ್ನು ನಾನು ಇಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ. ನಾವೆಲ್ಲರೂ ನಮ್ಮ ಹಿಂದಿನ ಜೀವನದ ಸಂಪರ್ಕವಿಲ್ಲದೆ ಬದುಕುತ್ತೇವೆ ಎಂದು ಹೇಳಿದ್ದರು. ನಾವು ಯಾರಾಗಿದ್ದೆವು ಎಂದು ನಮಗೆ ತಿಳಿದಿರುವುದಿಲ್ಲ. ನಮ್ಮ ಹಿಂದಿನ ಜೀವನವನ್ನು ತಿಳಿಯದೇ ಇರುವುದೇ ಒಳ್ಳೆಯದು. ನಮ್ಮ ಗತಕಾಲವನ್ನು ನಿಭಾಯಿಸುವಷ್ಟು ಆಧ್ಯಾತ್ಮಿಕ ಪ್ರಬುದ್ಧತೆ ನಮಗೆ ಇಲ್ಲದೇ ಇರಬಹುದು. ಮತ್ತು, ಕೇವಲ 'ಅವತಾರಗಳು' ಮಾತ್ರ ಅವರ ಗತಕಾಲದ ಬಗ್ಗೆ ತಿಳಿದಿರುತ್ತಾರೆಂದು ಅವರು ಹೇಳಿದರು. ಅವರು ದೇವರು ಎಂಬುದು ಅವರಿಗೆ ಅರಿವಿರುತ್ತದೆ. ಅವರಿಗೆ, ಅವರು ಯಾರು ಎಂಬ ಅರಿವು ಇರುತ್ತದೆ – ಉದಾಹರಣೆಗೆ – ಮಹಾವಿಷ್ಣುವಿನ ಭಾಗ ಅಥವಾ ಶಿವನ ಭಾಗ ಅಥವಾ ದೇವಿಯ ಭಾಗ. ಅವತಾರಗಳ ಹೊರತಾಗಿ ಬೇರೆ ಯಾರಿಗೂ ಅವರ ಹಿಂದಿನ ಜೀವನದ ಬಗ್ಗೆ ಅರಿವು ಇರುವುದಿಲ್ಲ. ಆದರೆ ವಿಶ್ವಾಮಿತ್ರ ಮಹರ್ಷಿ ಮತ್ತು ಅಮರ ಮಹರ್ಷಿಯವರು ಈ ನಿಯಮಕ್ಕೆ ಹೊರತಾಗಿದ್ದರು. ಅವರಿಗೆ ತಮ್ಮ ಹಿಂದಿನ ಬದುಕಿನ ಅರಿವು ಪ್ರತಿ ಹುಟ್ಟಿನಲ್ಲೂ ತಿಳಿದಿರುತ್ತದೆ. ಆದರೆ ಅವರಿಗೆ ಖಂಡಿತವಾಗಿ ನಮ್ಮೆಲ್ಲರ ಹಿಂದಿನ ಜೀವನದ ಬಗ್ಗೆ ಅರಿವಿರುತ್ತದೆ, ಕೇವಲ ಹಿಂದಿನ ಒಂದು ಜನ್ಮದ ಬಗ್ಗೆ ಅಲ್ಲ – ನೂರಾರು ಮತ್ತು ಸಾವಿರಾರು ಜನ್ಮಗಳ ಬಗ್ಗೆ – ಕೂಡಾ ತಿಳಿದಿರುತ್ತದೆ. ಅವರಿಗೆ ನಮ್ಮ ಭವಿಷ್ಯದ ಅರಿವು ಕೂಡ ಇರುತ್ತದೆ. ಆದರೂ ಅವರು ಎಂದಿಗೂ ನಮ್ಮನ್ನು ಅಳೆಯುವುದಿಲ್ಲ. ಅವರು ಬಹುಶಃ ನಮ್ಮಲ್ಲಿರುವ ಸಾಮರ್ಥ್ಯವನ್ನು ನೋಡಬಹುದು. ನಮ್ಮೆಲ್ಲರೊಳಗೂ ಒಂದು ದೈವಿಕ ಸಾಮರ್ಥ್ಯವಿರುತ್ತದೆ, ನಮ್ಮೆಲ್ಲರಲ್ಲೂ ಸಮಾನವಾದ ಸಾಮರ್ಥ್ಯ ಇದೆ.

ಮಹರ್ಷಿ ಅಮರರವರಂಥ ಮಾಸ್ಟರ್‌ಗಳ ಸಹಯೋಗದಲ್ಲಿ ಇರುವುದು ಮಹತ್ತರವಾದ ಆಶೀರ್ವಾದ. ನಾವೆಷ್ಟು ಅದೃಷ್ಟವಂತರು. ಮಹರ್ಷಿ ಅಮರ ಅವರು ಸತ್ಯವನ್ನು ಒಂದು ನವ ವಿಧಾನದಲ್ಲಿ ವಿವರಿಸಲು ಮತ್ತೆ ಬರುತ್ತಾರೆ ಎಂದು ಗುರೂಜಿಯವರು ಹೇಳಿದ್ದರು. ನಾವು ಅಭಿವೃದ್ಧಿ ಹೊಂದುತ್ತಾ ಹೋದ ಹಾಗೆ ಹೆಚ್ಚು ವಿವರಣೆಯ ಅಗತ್ಯ ಇದೆ. ನಾವು ಮುನ್ನಡೆದಂತೆ ಹೆಚ್ಚು ಜ್ಞಾನ, ಹೆಚ್ಚು ಚೈತನ್ಯಗಳನ್ನು ಕೆಳಗೆ ತರುವ ಅಗತ್ಯವಿದೆ. ನಮಗೆ ಸಹಾಯ ಮಾಡಲು, ನಮ್ಮನ್ನು ಬೇರೆ ಆಧ್ಯಾತ್ಮಿಕ ಎತ್ತರಕ್ಕೆ, ಇನ್ನೂ ಹೆಚ್ಚು ಎತ್ತರಕ್ಕೆ ಕೊಂಡೊಯ್ಯಲು ಅವರು ಮತ್ತೆ ಬರುತ್ತಾರೆ. ಅವರು ಇನ್ನೊಂದು ಆಧ್ಯಾತ್ಮಿಕ ಚಳುವಳಿಯನ್ನು ಆರಂಭ ಮಾಡಲು ಮತ್ತೆ ಬರುತ್ತಾರೆ. ನವ ಯುಗದ ಬಗ್ಗೆ ಉನ್ನತವಾದ ಆಧ್ಯಾತ್ಮಿಕ ಜ್ಞಾನ, ಪ್ರಳಯದ ಬಗ್ಗೆ, ನಮ್ಮ ಮೂಲದ ಬಗ್ಗೆ, ನಾವು ಯಾರು ಮತ್ತು ಏಕೆ ಇಲ್ಲಿ ಇದ್ದೇವೆ ಎನ್ನುವುದರ ಬಗ್ಗೆ ನಾವು ಈಗಾಗಲೇ ಎಷ್ಟೊಂದು ಜ್ಞಾನವನ್ನು ಹೊಂದಿದ್ದೇವೆ. ಇದಕ್ಕೆ ಅವರಿಗೆ ಧನ್ಯವಾದಗಳು.

(6ನೇ ಪುಟದಲ್ಲಿ ಮುಂದುವರೆದಿದೆ)

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆ ಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಕಾಂಚನಲತಾ

(5ನೇ ಪುಟದಿಂದ ಮುಂದುವರೆದಿದೆ)

ಪ್ರಳಯವು 1987ರಲ್ಲಿ ಆರಂಭವಾಯಿತು ಮತ್ತು ಅದರಲ್ಲಿ 7 ಹಂತಗಳಿದ್ದು, ಪ್ರತಿಯೊಂದು ಹಂತದಲ್ಲೂ 7 ವರ್ಷಗಳಿವೆ ಎಂದು ಅಮರರವರು ನಮಗೆ ವಿವರಿಸಿದ್ದಾರೆ. ಹಾಗಾಗಿ, ನಾವು 1987ನೇ ಇಸವಿಯಿಂದ 49 ವರ್ಷಗಳನ್ನು ಲೆಕ್ಕಾಚಾರ ಮಾಡಿದರೆ, ಪ್ರಳಯವು 2036ರ ತನಕ ಮುಂದುವರೆಯುತ್ತದೆ ಎಂದು ಅವರು ಹೇಳಿದ್ದಾರೆ. ಕೇವಲ ಅವರು ಮಾತ್ರ ಪ್ರಳಯವನ್ನು ಹೊಸ ರೀತಿಯಲ್ಲಿ ವಿವರಿಸಿದ್ದಾರೆ. ನಾವು ಪ್ರಳಯ ಎಂದರೆ ನಾಶ ಎಂದು ಭಾವಿಸಿದ್ದೆವು. ಪ್ರಳಯ ಎಂದರೆ ನಮ್ಮ ಒಳಗೆ ಇರುವ ಜಗತ್ತಿನಿಂದ ಮತ್ತು ನಮ್ಮ ಹೊರಗಿನ ಜಗತ್ತಿನಿಂದ ಅಂಧಕಾರವನ್ನು ನಿವಾರಣೆ ಮಾಡುವುದು ಎಂದು ವಿವರಿಸಿದರು.

ನಮ್ಮ ಒಳಗೆ ಇರುವ ಅಂಧಕಾರವನ್ನು ನಿವಾರಿಸುವುದು ಹೇಗೆ? ಅದನ್ನು ಖಂಡಿತವಾಗಿ ನಾವೇ ಮಾಡಬೇಕು ಆದರೆ ಇಂಥಾ ಸಮಯದಲ್ಲಿ ನಮಗೆ ಸಹಾಯ ಇದೆ, ವಿಶೇಷ ಸಹಾಯ ಇದೆ. ಪ್ರಳಯದ ಚೈತನ್ಯಗಳು ಆ ವಿಶೇಷವಾದ ಸಹಾಯವನ್ನು ಒದಗಿಸುತ್ತವೆ. ಈ ಶುದ್ಧೀಕರಣದಲ್ಲಿ ಅವು ನಮಗೆ ಸಹಾಯ ಮಾಡುತ್ತವೆ. ಆ ಚೈತನ್ಯಗಳು ನಮ್ಮೊಳಗೆ ಕೆಲಸ ಮಾಡಲು ಅನುಮತಿ ಕೊಡುವ ಮೂಲಕ ಈ ಶುದ್ಧೀಕರಣಕ್ಕೆ ಅವಕಾಶ ನೀಡಬೇಕು. ನಾವು ನಮ್ಮ ಒಳಗಿನ ಜಗತ್ತನ್ನು ಸ್ವಚ್ಛಗೊಳಿಸಿಕೊಂಡಾಗ, ಹೊರಗಿನ ಜಗತ್ತು ಕೂಡ ಶುದ್ಧವಾಗುತ್ತದೆ. ತೀವ್ರವಾದ ಸ್ವಚ್ಛಗೊಳಿಸುವ ಪ್ರಕ್ರಿಯೆಯು ಒಳಗೂ ಮತ್ತು ಹೊರಗೂ ತೀವ್ರಗೊಳ್ಳುತ್ತಾ ಹೋಗುತ್ತದೆ ಎಂದು ನನಗೆ ಅನಿಸುತ್ತದೆ.

ಮಹರ್ಷಿ ಅಮರ ಅವರು ಎಷ್ಟೊಂದು ಕೆಲಸ ಮಾಡಿದ್ದಾರೆ. ಅವರು ಬೃಹತ್ ಪ್ರಮಾಣದ ಚೈತನ್ಯಗಳನ್ನು ಮತ್ತು ಎಷ್ಟೊಂದು ಜ್ಞಾನವನ್ನು ಕೆಳಗೆ ತಂದರು. ಅದು ಜಗತ್ತಿನ ಕಲ್ಯಾಣಕ್ಕಾಗಿ. ಪ್ರತಿ ಅವತಾರದಲ್ಲೂ ಅವರು ಆಧ್ಯಾತ್ಮಿಕ ಚಳುವಳಿಯನ್ನು ಆರಂಭ ಮಾಡಿದರು. ಈ ಆಧ್ಯಾತ್ಮಿಕ ಚಳುವಳಿಗಳು ನಂತರದ ಪೀಳಿಗೆಗಳಿಗೆ ಮಾರ್ಗದರ್ಶನ ಮಾಡಿದವು ಮತ್ತು ಈ ಚಳುವಳಿಗಳು ನಮಗೂ ಮಾರ್ಗದರ್ಶನ ಮಾಡುತ್ತಿವೆ. ಸಂತ ಏಕನಾಥರನ್ನು ಕುರಿತು, ಸಂತ ಗೋರ ಕುಂಬಾರರನ್ನು ಕುರಿತು ಮತ್ತು ಮಹರ್ಷಿ ಅಮರರವರ ಪಾಶ್ಚಿಮಾತ್ಯ ದೇಶಗಳಲ್ಲಿನ ಇನ್ನಿತರ ಅವತಾರಗಳನ್ನು ಕುರಿತು ಯೋಚಿಸಿ. ಸಾವಿರಾರು ವರ್ಷಗಳ ನಂತರವೂ ಅವರ ಬೋಧನೆಗಳು ಆಧ್ಯಾತ್ಮಿಕ ಆಕಾಂಕ್ಷಿಗಳಿಗೆ ಮಾರ್ಗದರ್ಶನ ಮಾಡುತ್ತಿವೆ. ಈ ಜನ್ಮದಲ್ಲಿ ಮಹರ್ಷಿ ಅಮರರವರಾಗಿ ಅವರು ನವ ಯುಗದ ಆಧ್ಯಾತ್ಮಿಕ ಚಳುವಳಿಯನ್ನು ಆರಂಭಿಸಿದರು. ನವ ಯುಗದ ಬಗ್ಗೆ ಮೊದಲಿಗೆ ಮಾತನಾಡಿದವರು ಅವರೇ. ಅವರು ತಮ್ಮ ನೇರ ಅನುಭವದಿಂದ ಸಂಪಾದಿಸಿದ ಜ್ಞಾನವನ್ನು ಹಂಚಿಕೊಂಡರು. ಅವರು ಪುಸ್ತಕಗಳಿಂದ ಉಲ್ಲೇಖಿಸಲಿಲ್ಲ. ಅವರು ಹಂಚಿದ ಜ್ಞಾನಗಳು ಪುಸ್ತಕಗಳಿಂದ ಅಲ್ಲವಾದರೂ, ಅವರು ನಮಗೆ ನೀಡಿದ ಜ್ಞಾನವನ್ನು ಪುಸ್ತಕಗಳಲ್ಲಿ ಬರೆದಿಡಬಹುದು. ಗುರೂಜಿಯವರು ಆ ಕೆಲಸವನ್ನು ಮಾಡಿದ್ದಾರೆ ಮತ್ತು ಜ್ಞಾನವನ್ನು ಪ್ರಕಟಣೆ ಮಾಡುವ ಕೆಲಸ ಇಂದಿಗೂ ಮುಂದುವರೆದಿದೆ.

ನಮಗೆ ತಿಳಿದಿರುವಂತೆ, ಜಗತ್ತಿನ ಆಧ್ಯಾತ್ಮಿಕ ಮತ್ತು ಕಲ್ಯಾಣಾಭಿವೃದ್ಧಿಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಇವರು ಅತಿ ಪ್ರಮುಖ ವ್ಯಕ್ತಿಯಾಗಿದ್ದಾರೆ. ಆದುದರಿಂದಲೇ ಅವತಾರಗಳು ಇವರೊಂದಿಗೆ ಕೆಲಸ ಮಾಡಿದರು. ಅಪಾಯಗಳಿಂದ ತುಂಬಿದ್ದ ಅತಿ ಕಷ್ಟದ ಕೆಲಸಗಳನ್ನು ಅವರು ಮಾಡಿದ್ದಾರೆ. ಅವರಿಗೆ ಏನು ಬೇಕಾದರೂ ಆಗಬಹುದಿತ್ತು, ಅದು ಕೇವಲ ಅವರ ಭೌತಿಕ ಶರೀರಕ್ಕಲ್ಲ, ಆವರ ಸೂಕ್ಷ್ಮ (ಆಸ್ಟ್ರಲ್) ಶರೀರಕ್ಕೂ ಕೂಡ. ಅವರಿಗೆ ಎಂಥಾ ಧೈರ್ಯವಿದ್ದಿರಬಹುದು, ಅವರಿಗೆ ಋಷಿಗಳ ಮೇಲೆ ಎಂಥಾ ನಂಬಿಕೆಯಿದ್ದಿರಬಹುದು ಮತ್ತು ಅವರಿಗೆ ಋಷಿಗಳ ಕೆಲಸದ ಬಗ್ಗೆ ಎಂಥಾ ಬದ್ಧತೆಯಿದ್ದಿರಬಹುದು! ಅವರಿಗಾಗಿ ಏನು ಬೇಕಾದರೂ ಮಾಡಲು ಅವರು ಸಿದ್ಧರಿದ್ದರು.

ಅವರ ಜೀವನ ಒಂದು ಅದ್ಭುತ ಸ್ಫೂರ್ತಿ. ಮಹರ್ಷಿ ಅಮರರವರು ಸತ್ಯವನ್ನು ಬಹಳ ಸರಳವಾದ ಮತ್ತು ನೇರವಾದ ರೀತಿಯಲ್ಲಿ ಮಂಡಿಸುತ್ತಿದ್ದರು. ಅವರು ವಿಷಯಗಳನ್ನು ನಾಟಕೀಯವಾಗಿಸುತ್ತಿರಲಿಲ್ಲ, ಜನರ ಮನವೊಲಿಸಲು ಪ್ರಯತ್ನಿಸುತ್ತಿರಲಿಲ್ಲ. ಜನರು ಅವರು ಹೇಳಿದ್ದನ್ನು ಒಪ್ಪಿಕೊಂಡರೋ ಇಲ್ಲವೋ ಅನ್ನುವುದರ ಬಗ್ಗೆಯೂ ಚಿಂತಿಸುತ್ತಿರಲಿಲ್ಲ. ಇವರಂತಹ ಮಾಸ್ಟರ್‌ಗಳು ಜನ ಸಮೂಹಗಳನ್ನು ಜಾಗೃತಿಗೊಳಿಸಲು, ಮುಂದಿನ ಪೀಳಿಗೆಗಳನ್ನು ಜಾಗೃತಿಗೊಳಿಸಲು ಸಹಾಯ ಮಾಡುತ್ತಾರೆ. ನಾನು ಜನ ಸಮೂಹಗಳ ಬಗ್ಗೆ ಮಾತನಾಡಿದಾಗ, ಅದು ಸ್ವಲ್ಪ ವಿಚಿತ್ರವಾಗಿ ಕೇಳಿಸಬಹುದು ಏಕೆಂದರೆ ಈ ನಮ್ಮ ಮಾರ್ಗದಲ್ಲಿ ನಾವು ಪ್ರತ್ಯೇಕ ವ್ಯಕ್ತಿಗಳ ಮೇಲೆ ಗಮನ ನೀಡುತ್ತೇವೆ. ನಾವು ಸಮೂಹಗಳನ್ನು ಉದ್ದೇಶಿಸುವುದಿಲ್ಲ. ಮಹರ್ಷಿ ಅಮರರವರು ಇಲ್ಲಿ ದೈಹಿಕವಾಗಿ ಇದ್ದಾಗ ಅವರು ಜನರಿಗೆ ತಿಳಿದೇ ಇರಲಿಲ್ಲ. ಅವರು ಕೆಲವೇ ಜನರಿಗೆ ಗೊತ್ತಿದ್ದರು. ಅವರು ಅಜ್ಞಾತವಾಗಿಯೇ ಉಳಿದರು ಮತ್ತು ಉದ್ದೇಶ ಪೂರ್ವಕವಾಗಿ ಪ್ರಚಾರದಿಂದ ತಪ್ಪಿಸಿಕೊಳ್ಳುತ್ತಿದ್ದರು. ಆದರೂ ಇಂದು ಅಸಂಖ್ಯಾತ ಜನರಿಗೆ ಸ್ಫೂರ್ತಿ ನೀಡುತ್ತಿದ್ದಾರೆ. ಮತ್ತು ಈ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಅವರ ಹಿಂದಿನ ಅವತಾರಗಳನ್ನು ನೆನಪಿಸಿಕೊಳ್ಳಿ. ಇಂದು ಲಕ್ಷ ಲಕ್ಷ ಜನರು ಅವರಿಂದ ಸ್ಫೂರ್ತಿ ಪಡೆದಿದ್ದಾರೆ. ಅದೇ ರೀತಿ ಮುಂದೆಯೂ ಆಗುತ್ತದೆ. ಮುಂದಿನ ಪೀಳಿಗೆಗಳು ಅವರ ಬೆಳಕಿನಿಂದ ಮಾರ್ಗದರ್ಶನವನ್ನು ಪಡೆಯುತ್ತಾರೆ. ಬೇರೆ ಇನ್ನೊಂದು ಮಟ್ಟದಲ್ಲಿ ಅವರು ಈಗಾಗಲೇ ಅನೇಕ ಜನರಿಗೆ, ಬಹುಶಃ ಲಕ್ಷಾಂತರ ಜನರಿಗೆ ಮಾರ್ಗದರ್ಶನ ನೀಡುತ್ತಿರಬಹುದು. ಮತ್ತು ಅವರು ಕೆಳತಂದು ಸಂಗ್ರಹಿಸಿಟ್ಟಿರುವ ಚೈತನ್ಯಗಳು ಜನರಿಗೆ ಇನ್ನೂ ಆಳವಾದ ಮಟ್ಟದಲ್ಲಿ, ಆಧ್ಯಾತ್ಮಿಕ ಮಟ್ಟದಲ್ಲಿ ಮಾರ್ಗದರ್ಶನ ಮಾಡುತ್ತದೆ. ಮಹರ್ಷಿ ಅಮರ ಅವರ ಇರುವಿಕೆಯೇ, ಈ ಭೂಮಿಯ ಮೇಲಿನ ಇರುವಿಕೆಯೇ ಒಂದು ರೀತಿಯ ಆಧ್ಯಾತ್ಮಿಕ ಅಲೆಯನ್ನು ಹುಟ್ಟುಹಾಕುತ್ತದೆ, ಜನರನ್ನು ಜಾಗೃತಗೊಳಿಸುವ ಆಧ್ಯಾತ್ಮಿಕ ಅಲೆ. ■

# ಪ್ರಶ್ನೋತ್ತರಗಳು

ಜಯಂತ್ ದೇಶ್‌ಪಾಂಡೆ
ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಭಗವದ್ಗೀತೆ ಆರನೇ ಅಧ್ಯಾಯದಲ್ಲಿ, ಯಾವ ವ್ಯಕ್ತಿ ತನ್ನ ಸಂಕಲ್ಪವನ್ನು ತ್ಯಜಿಸುವನೋ, ಆ ವ್ಯಕ್ತಿ ಮಾತ್ರ ಯೋಗಿ ಆಗಬಲ್ಲನು ಎಂದು ಉಲ್ಲೇಖಿಸಲಾಗಿದೆ. ಆದರೆ ನಾವು ನಮ್ಮ ಜೀವನದಲ್ಲಿ ಬಹುತೇಕ ಪ್ರತಿ ದಿನ ಸಂಕಲ್ಪ ಮಾಡುತ್ತಿರುತ್ತೇವೆ. ಹೀಗಿರುವಾಗ ಇದು ಹೇಗಾಗುತ್ತದೆ?**

ಉ: ಭಗವದ್ಗೀತೆ ಬಗ್ಗೆ ನನಗೆ ಹೆಚ್ಚು ಗೊತ್ತಿಲ್ಲ ಮತ್ತು ಸಂಸ್ಕೃತ ಭಾಷೆಯೂ ನನಗೆ ತಿಳಿದಿಲ್ಲ. ಆದರೆ ಈ ಪ್ರಶ್ನೆಗೆ ಉತ್ತರಿಸಲು ನಾನು ಸಂಶೋಧನೆಗೆ ಪ್ರಯತ್ನಿಸಿದೆ. ನಂತರ ನಾನು ಗೀತೆಯಲ್ಲಿರುವ ಈ ನಿರ್ದಿಷ್ಟ ಶ್ಲೋಕದಲ್ಲಿರುವ ಸಂಕಲ್ಪದ ಅರ್ಥ, ಬಯಕೆ ಎಂದು ಕಂಡುಕೊಂಡೆ. ಒಬ್ಬ ವ್ಯಕ್ತಿ ಯೋಗಿ ಆಗಲು ಆತ ಎಲ್ಲವನ್ನೂ ತ್ಯಜಿಸಬೇಕು. ಈ ರೀತಿಯಾಗಿ ನಾನು ಅರ್ಥ ಮಾಡಿಕೊಂಡಿದ್ದೇನೆ. ನಾವು ನಮ್ಮ ಬಯಕೆಗಳನ್ನು ಬಿಡಬೇಕಾಗಿಲ್ಲವೆಂದು ಗುರೂಜಿಯವರು ಹೇಳುತ್ತಿದ್ದರಾದರೂ, ನಾವು ಉನ್ನತ ಬಯಕೆಗಳನ್ನು ಹೊಂದಿರಬೇಕು. ಉದಾಹರಣೆಗೆ ದೇವರ ಅನುಭವ ಪಡೆಯುವ ಬಯಕೆ ನಮಗಿರಬೇಕು. ಗೀತೆಯ ಈ ಶ್ಲೋಕದ ಸಂದರ್ಭವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನಮ್ಮನ್ನು ದೇವರಿಂದ ದೂರವಾಗಿಸಬಹುದಾದ ಬಯಕೆಗಳನ್ನು ಬಿಟ್ಟುಬಿಡಬೇಕು. ಆದ ಕಾರಣ ಯೋಗಿ ಆಗಬೇಕೆಂದರೆ, ನಾವು ಸಂಕಲ್ಪ ಅಂದರೆ ಬಯಕೆಗಳನ್ನು ತ್ಯಜಿಸಬೇಕು ಎಂದು ಅರ್ಥ ಮಾಡಿಕೊಂಡಿದ್ದೇನೆ. ಆದರೆ ನಾವು ಪ್ರತಿ ದಿನ ಸಂಕಲ್ಪ ಅಥವಾ ನಿರ್ಣಯಗಳನ್ನು ಮಾಡಬಹುದು.

**ಪ್ರ: ಮುಕ್ತಿ ಪಡೆಯುವುದಕ್ಕಾಗಿ ಮಾಡುವ ಆಧ್ಯಾತ್ಮಿಕ ಅಭ್ಯಾಸಗಳು ಯಾವುವು? ಮತ್ತು ಮುಕ್ತಿ ಪಡೆದ ನಂತರ, ಭೌತಿಕ ಪ್ರಪಂಚವನ್ನು ಬಿಡಬೇಕೆ? ಮತ್ತು ಮುಕ್ತಿ ಸ್ಥಿತಿಯನ್ನು ತಲುಪಿದ್ದೇವೆ ಎಂದು ನಮಗೆ ಹೇಗೆ ತಿಳಿಯುತ್ತದೆ?**

ಉ: ಮುಕ್ತಿ ಬಗ್ಗೆ ಮಾತನಾಡಲು ನಾನು ತುಂಬಾ ಚಿಕ್ಕವನು. ಇದು ತುಂಬಾ ಗಹನವಾದ ವಿಷಯ. ಗುರೂಜಿ ಹೇಳಿರುವ ಪ್ರಕಾರ, ನಾವು ಮುಕ್ತಿ ಪಡೆಯಲು ನಮ್ಮ ಎಲ್ಲಾ ಕರ್ಮಗಳನ್ನು ತೀರಿಸಬೇಕು. ಅದಕ್ಕಾಗಿ ನಾವು ಧ್ಯಾನ ಮಾಡಬೇಕು ಮತ್ತು ಪರಿವರ್ತನೆ ಹೊಂದಬೇಕು. ನಾವು ಮುಕ್ತಿ ಸ್ಥಿತಿಯನ್ನು ತಲುಪಿದಾಗ, ಅದು ಹೇಗೋ ನಾವು ಮುಕ್ತಿ ಸ್ಥಿತಿಯನ್ನು ತಲುಪಿದ್ದೇವೆ ಎಂದು ಅಂತರ್ಬೋಧೆಯಿಂದ ತಿಳಿಯುತ್ತೇವೆ. ಮುಕ್ತಿ ಸ್ಥಿತಿಯನ್ನು ತಲುಪಿದ ನಂತರ ನಾವು ನಮ್ಮ ಜೀವನವನ್ನು ಮುಂದುವರೆಸಬೇಕು. ನಮ್ಮ ಶರೀರ ಎಲ್ಲಿಯವರೆಗೆ ಇರುತ್ತದೆಯೋ, ಅಲ್ಲಿಯವರೆಗೆ ನಾವು ಎಲ್ಲ ನಿಯಮಗಳನ್ನು, ಎಲ್ಲ ಮೌಲ್ಯಗಳನ್ನು ಅನುಸರಿಸುತ್ತಾ ಈ ಭೂಮಿಯ ಮೇಲೆ ಜೀವಿಸಿರಬೇಕು.

**ಪ್ರ: ನನ್ನ ಮನೆಯಲ್ಲಿ ಧ್ಯಾನಕ್ಕಾಗಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಕುಳಿತುಕೊಳ್ಳುತ್ತೇನೆ. ಅದೇ ಸ್ಥಳವನ್ನು ಕುಟುಂಬದ ಇತರ ಜನರು ಧ್ಯಾನಕ್ಕಾಗಿ ಬಳಸಿಕೊಳ್ಳಬಹುದೇ?**

ಉ: ಈ ರೀತಿ ಮಾಡಬಹುದೆಂದು ನಾನು ಭಾವಿಸುತ್ತೇನೆ. ಒಂದು ಮನೆಯಲ್ಲಿ ಎಲ್ಲರ ಬಳಕೆಗಾಗಿ ಧ್ಯಾನಕ್ಕೆಂದೇ ಪ್ರತ್ಯೇಕ ಸ್ಥಳ ಮಾಡಿಕೊಂಡರೆ ತಪ್ಪೇನಿಲ್ಲ.

**ಪ್ರ: ಆತ್ಮ ಸಂಗಾತಿಗಳು ಜೋಡಿಯಾಗಿ ಬರುತ್ತಾರೆ. ಆದ್ದರಿಂದ ಮುಕ್ತಿ ಪಡೆದು ಹಿಂದಿರುಗುವಾಗ, ನಮ್ಮ ಆತ್ಮ ಸಂಗಾತಿಯು ಮುಕ್ತಿ ಪಡೆಯುವವರೆಗೂ ನಮ್ಮ ಮೂಲ ನೆಲೆಗೆ ಹಿಂದಿರುಗಲು ಸಾಧ್ಯವಿಲ್ಲ. ಇದು ಸರಿಯೇ?**

ಉ: ಆತ್ಮ ಸಂಗಾತಿಗಳು ಒಂದೇ ಘಟಕದಂತೆ (one unit) ಎಂದು ಗುರೂಜಿ ಹೇಳಿದ್ದರು. ಒಂದು ಆತ್ಮವು ಮುಕ್ತಿಯನ್ನು ಸಾಧಿಸಿದರೆ ಅಥವಾ ಪಡೆದರೆ ಆತ್ಮ ಸಂಗಾತಿಯೂ ಕೂಡ ಮುಕ್ತಿಗೆ ಅರ್ಹನಾಗುತ್ತಾನೆ ಅಥವ ಅರ್ಹಳಾಗುತ್ತಾಳೆ. ಆದ್ದರಿಂದ ಇಬ್ಬರೂ ಒಟ್ಟಿಗೆ ಪ್ರಯಾಣಿಸುತ್ತಾರೆ. ಒಬ್ಬ ವ್ಯಕ್ತಿಯು ಮೊದಲೇ ದೇಹವನ್ನು ತೊರೆಯುವ ಸಾಧ್ಯತೆ ಇದೆ. ಅಂತಹ ಸಂದರ್ಭದಲ್ಲಿ, ದೇಹವನ್ನು ತೊರೆದ ವ್ಯಕ್ತಿಯು ಆತನ ಅಥವಾ ಆಕೆಯ ಆತ್ಮ ಸಂಗಾತಿಯು ಈ ಭೂಮಿಯ ಮೇಲಿನ ಜೀವಿತಾವಧಿಯನ್ನು ಪೂರ್ಣಗೊಳಿಸುವವರೆಗೂ ಉನ್ನತ ಲೋಕಗಳೊಂದರಲ್ಲಿ ಕಾಯುತ್ತಿರಬೇಕಾಗುತ್ತದೆ. ಮತ್ತು ಭೂಮಿಯಲ್ಲಿರುವ ಆತ್ಮವು ತನ್ನ ಜೀವಿತಾವಧಿಯನ್ನು ಪೂರ್ಣಗೊಳಿಸಿದ ನಂತರ ಆಕೆ ಅಥವಾ ಆತ ಉನ್ನತ ಲೋಕದಲ್ಲಿ ಕಾಯುತ್ತಿರುವ ತನ್ನ ಆತ್ಮ ಸಂಗಾತಿಯೊಂದಿಗೆ ಸೇರಿಕೊಳ್ಳುತ್ತಾರೆ. ಅಲ್ಲಿಂದ ಅವರು ಒಟ್ಟಿಗೆ ಪಯಣಿಸುತ್ತಾರೆ. ಅವರು ತಮ್ಮ ಮನಸ್ಸುಗಳನ್ನು ಬ್ರಹ್ಮ ಲೋಕದಲ್ಲಿ ಹಿಂದಿರುಗಿಸಬೇಕು. ಅದರ ನಂತರ ಅವರ ಜೋಡುವಿಕೆಯನ್ನು ತೆಗೆದುಹಾಕಲಾಗುತ್ತದೆ.


**ಪ್ರ: ನನ್ನ ಧ್ಯೇಯ ಮತ್ತು ನನ್ನ ಜೀವನದ ಉದ್ದೇಶವನ್ನು ಸಾಧಿಸುವಲ್ಲಿ ನಾನು ಋಷಿಗಳಿಂದ ಹೇಗೆ ಮಾರ್ಗದರ್ಶನವನ್ನು ಪಡೆಯಲಿ? ಧ್ಯಾನ ಮಾಡುತ್ತಿರುವಾಗ ಈ ಸಂದೇಶವನ್ನು ಋಷಿಗಳಿಗೆ ತಿಳಿಸಬೇಕೆ ಅಥವಾ ಇದನ್ನು ಹೇಗೆ ಮಾಡಬೇಕು?**

ಉ: ಧ್ಯಾನ ಮಾಡುವಾಗ ನಾವು ಏನನ್ನೂ ಮಾಡುವುದಿಲ್ಲ. ಇದನ್ನು ನಾವು ಗುರೂಜಿಯವರಿಂದ ಕಲಿತಿದ್ದೇವೆ. ನಾವು ಶರಣಾಗತರಾಗಿ ಸುಮ್ಮನೆ ಮೌನವಾಗಿ ಕುಳಿತುಕೊಳ್ಳುತ್ತೇವೆ. ನಾವು ಧ್ಯಾನ ಮಾಡಿದರೆ ನಮ್ಮ ಅಂತರ್ ಗ್ರಹಿಕೆಯಿಂದ ಮಾರ್ಗದರ್ಶನ ಪಡೆಯುತ್ತೇವೆ ಎಂದು ನಾನು ನಂಬುತ್ತೇನೆ. ಆದರೆ ನಾವು ಋಷಿಗಳೊಂದಿಗೆ ಸಂವಹನ ನಡೆಸಲು ಬಯಸಿದರೆ, ಗುರೂಜಿಯವರು ನೀಡಿದ ತಂತ್ರಗಳಿವೆ ಮತ್ತು ತಂತ್ರಗಳು ಮುಖ್ಯವಲ್ಲ ಎಂದೂ ಅವರು ನಮಗೆ ಹೇಳಿದ್ದರು. ಪ್ರೀತಿಯೇ ಮುಖ್ಯ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 & 4 | each 200/- |
| Thus Spoke Guruji Krishnananda - Vol 2 & 3 | each 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KRNA/BGE/1124/ 2020-2022
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ತಪೋನಗರ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ. ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ನಕಾರಾತ್ಮಕ ಸಂದರ್ಭಗಳು ಹಾಗೂ ನಿತ್ಯ ಜೀವನದಲ್ಲಿ ಸವಾಲುಗಳು ಎದುರಾದಾಗ, ಸ್ವಲ್ಪ ನಿಧಾನಿಸಿ, ಏನು ತಪ್ಪಾಗಿದೆ, ಅವುಗಳಿಂದ ಯಾವ ಪಾಠ ಕಲಿಯಬೇಕಾಗಿದೆ ಎಂದು ತಿಳಿಯಲು ಪ್ರಯತ್ನಿಸುತ್ತೇನೆ. ಬೇರೇನಿಲ್ಲದಿದ್ದರೂ ಶರಣಾಗತಿ ತನ್ನಷ್ಟಕ್ಕೆ ತಾನೇ ಬರುತ್ತದೆ. ಇದು ಹೇಳಿಕೊಳ್ಳಲು ಸಣ್ಣ ವಿಷಯವೆನಿಸಿದರೂ, ನನ್ನ ಜೀವನದ ಪ್ರತಿಕ್ಷಣಗಳಲ್ಲೂ ಪೂರ್ಣ ಅರಿವಿನೊಂದಿಗೆ ಪ್ರಜ್ಞಾಪೂರ್ವಕವಾಗಿ ವರ್ತಿಸಲು ಇದು ಸಹಾಯಮಾಡಿದೆ. ಇದು ನನ್ನಲ್ಲಾಗಿರುವ ದೊಡ್ಡ ಬದಲಾವಣೆ. ಹೀಗೆಯೇ ನಾನು ಇನ್ನೂ ಎತ್ತರಕ್ಕೆ ಬೆಳೆಯಬೇಕು. ಅದಕ್ಕೆ ಬಹಳ ಸಮಯ ಹಿಡಿಯುತ್ತದೆ. ಆದರೆ ಅದರಿಂದ ನನಗೆ ಸಂತೋಷವಾಗಿದೆ. ಗುರೂಜಿಯವರಲ್ಲಿ ಬೇರೇನನ್ನು ಕೇಳಲಿ? ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

– ಶಾಂತಕುಮಾರಿ ಹೆಚ್. ಎಸ್.

ಹೊಸ ಯುಗದ ಚೈತನ್ಯಗಳಿಗೆ ನಾನು ಹೊಂದಿಕೊಂಡು ಹೋಗುತ್ತಿರುವ ಅನುಭವವಾಗುತ್ತಿದೆ. ಯಾವುದೇ ಋಣಾತ್ಮಕ ಯೋಚನೆಗಳಿಲ್ಲ. ನಾನು ಸಂಧಿಸುವ ಪ್ರತಿಯೊಬ್ಬರನ್ನೂ ಹೃತ್ಪೂರ್ವಕವಾಗಿ ಆದರಿಸುತ್ತೇನೆ.

– ರೋಲಾಂಡ್ ಪಿ

ಒಂದು ದಿನ ಬೆಳಕನ್ನು ಚಾನಲ್ ಮಾಡುತ್ತಿದ್ದಾಗ, ಕೆಲವು ನಿಮಿಷಗಳಲ್ಲಿ ಆಳವಾದ ನಿಶ್ಶಬ್ದತೆಗೆ ಜಾರಿದೆ. ನಾನು ಧ್ಯಾನ ಮಂದಿರದಲ್ಲಿ ನಮ್ಮ ಪ್ರೀತಿಯ ಅಮರಾಜಿ ಹಾಗೂ ಗುರೂಜಿಯವರ ಭಾವಚಿತ್ರದ ಮುಂದೆ ಕುಳಿತಿದ್ದೆ. ಆ ಭಾವಚಿತ್ರಗಳು ಮಂದವಾದ ಬಿಳಿ ಬಣ್ಣದ ಹೂಗಳಿಂದ ಅಲಂಕರಿಸಲ್ಪಟ್ಟಿದ್ದವು. ಸ್ವಲ್ಪ ಸಮಯದ ನಂತರ ಆ ಭಾವಚಿತ್ರಗಳ ಪಕ್ಕದಲ್ಲಿ ಕಣ್ಮುಚ್ಚಿ ಕುಳಿತಿದ್ದ ಜಯಂತ್ ಜೀ ಅವರನ್ನು ಕಂಡೆ. ತಕ್ಷಣ ಮಂದಬಣ್ಣದಿಂದ ಕೂಡಿದ್ದ ಹೂವಿನಹಾರ ಪ್ರಕಾಶವಾನವಾಯಿತು, ನಂತರದಲ್ಲಿ ಬಿಳಿಯ ಕಿರಣಗಳನ್ನು ನಮ್ಮೆಲ್ಲರಿಗೆ ಹರಡಲು ಪ್ರಾರಂಭಿಸಿತು. ಈ ಅನುಭವ ಕೆಲವು ನಿಮಿಷಗಳವರೆಗೆ ಮುಂದುವರೆಯಿತು. ನಂತರ ನಿದ್ದೆಗೆ ಜಾರಿದೆ. ಕಣ್ತೆರೆದಾಗ 25 ನಿಮಿಷಗಳು ಕಳೆದುಹೋಗಿದ್ದವು. ನಂತರದ ಅನುಭವ ಅವರ್ಣನೀಯ.

– ಸಿ. ಸ್ವಾಮಿನಾಥನ್

ಗುರು ಪೌರ್ಣಿಮೆಯ ನಂತರದ ದಿನ, ಧ್ಯಾನದ ನಂತರ ಸುಮ್ಮನೆ ಕಣ್ಮುಚ್ಚಿ ವಿಶ್ರಾಂತಿ ಪಡೆಯುತ್ತಿದ್ದೆ. ಇದ್ದಕ್ಕಿದ್ದ ಹಾಗೆ ನಾನು ತಪೋನಗರದ ಗುರೂಜಿಯವರ ಸಮಾಧಿಯ ಕೊಠಡಿಯ ಬಳಿ ಇದ್ದೆ. ಅದು ಅತ್ಯಂತ ಪ್ರಕಾಶಮಾನವಾಗಿತ್ತು. ನಾನು ಗುರೂಜಿಯವರ ಸಮಾಧಿ ಕೊಠಡಿಯನ್ನು ಪ್ರವೇಶಿಸಿದೆ. ಅಲ್ಲಿ ಗುರೂಜಿಯವರು ಮುಗುಳ್ನಗುತ್ತಿದ್ದರು. ಅವರ ಪಾದಸ್ಪರ್ಶ ಮಾಡಿದೆ, ಅವರು ನನ್ನನ್ನು ಆಶೀರ್ವದಿಸಿದರು. ಯಾವುದೇ ಮಾತುಕತೆ ಇಲ್ಲದೆ ಕಣ್ಣುಗಳ ಸಮಾಗಮದಿಂದ ಎಲ್ಲವೂ ತಿಳಿಯಿತು. ಅದು ಅನೇಕ ದೀಪಗಳಿಂದ ಕೂಡಿದ ದೀಪಾವಳಿಯ ಒಂದು ಸುಂದರ ದಿನವನ್ನು ನೆನಪಿಗೆ ತಂದಿತು. ಇಡೀ ದಿನ ನಾನು ಅತ್ಯಂತ ಉಲ್ಲಾಸದಿಂದಿದ್ದೆ. ಇಂತಹ ಅನುಭವ ಹಿಂದೆಂದೂ ಆಗಿರಲಿಲ್ಲ. ನನ್ನ ದೇಹದಲ್ಲಿ ಹೊಸ ಚೈತನ್ಯ ತುಂಬಿತು. ಇದರ ವರ್ಣನೆ ಅಸಾಧ್ಯ.

– ವಿಕ್ರಮ್ ದೇಸಾಯಿ

ಬೆಳಕನ್ನು ಚಾನಲ್ ಮಾಡುವಾಗ ಬೆಳಕಿನ ಅನುಭವ ನನಗಾಗುತ್ತದೆ. ಇದು ಪ್ರಶಾಂತತೆಯನ್ನು ಹಾಗೂ ಕೆಲವೊಮ್ಮೆ ಮಾರ್ಗದರ್ಶನವನ್ನು ಕೂಡ ಕೊಡುತ್ತದೆ. ಇತರರೊಡನೆ ನನ್ನ ಸಂಬಂಧ ಹಾಗೂ ಒಡನಾಟ ಸುಧಾರಿಸಿದೆ. ಈಗ ನಾನು ವಿನಮ್ರಳಾಗಿದ್ದೇನೆ, ಬೇರೆಯವರಿಗೆ ಸಹಾಯ ಮಾಡಬೇಕೆಂಬ ಹಂಬಲ ಉಂಟಾಗಿದೆ.

– ವೀಣಾ ಸುರುವು

ಒಂದು ದಿನ ನಾನು ಬೆಳಕನ್ನು ಚಾನಲ್ ಮಾಡುತ್ತಿದ್ದಾಗ, ಒಂದು ಹಮ್ಮಿಂಗ್ ಬರ್ಡ್ ಏನನ್ನೋ ಹೇಳಬೇಕೆಂಬಂತೆ ರೆಕ್ಕೆ ಬಡಿಯುತ್ತಾ ನನ್ನ ಸುತ್ತಲೂ ಹಾರುತ್ತಿತ್ತು. ಅದು ಆಶೀರ್ವಾದದಂತೆ ಭಾಸವಾಯಿತು ಮತ್ತು ಎತ್ತರಕ್ಕೆ ಏರಿಸಿದಂತೆ ಭಾಸವಾಯಿತು.

ಕೆಲವು ವರ್ಷಗಳ ಹಿಂದೆ ಹಾಕಿದ್ದ ಹೂವಿನ ಗಿಡಗಳು ಹೂಗಳಿಂದ ತುಂಬಿದ್ದು, ಅನೇಕ ದುಂಬಿಗಳು ಅವುಗಳಿಂದ ಆಕರ್ಷಿಸಲ್ಪಡುತ್ತಿವೆ. ದುಂಬಿಗಳು ಮಕರಂದವನ್ನು ಹೀರುವ ನೋಟ ಬಹಳ ಖುಷಿ ಹಾಗೂ ಸಂತೃಪ್ತಿಯನ್ನು ತರುತ್ತದೆ. ಇಂತಹ ಅತ್ಯಮೂಲ್ಯವಾದ ಕ್ಷಣಗಳನ್ನು ನೀಡಿದ ಸಪ್ತಋಷಿಗಳು ಹಾಗೂ ಗುರೂಜಿಯವರಿಗೆ ವಂದನೆಗಳು.

– ಸ್ಮಿತಾ ಶೆಟ್ಟಿ

ಸಕಾರಾತ್ಮಕತೆ ಹಾಗೂ ಪ್ರಶಾಂತತೆಗೆ ಜಾಗೃತಿ ಒಂದು ಅತ್ಯಮೂಲ್ಯವಾದ ಅಂಶ. ಬೆಳಕು ಅಥವಾ ಉನ್ನತ ಬುದ್ಧಿವಂತಿಕೆಗೆ ಶರಣಾಗುವುದರಿಂದ, ಎಂತಹ ಕಷ್ಟಕರ ಸಂದರ್ಭವನ್ನೂ ಸುಲಭವಾಗಿ ಎದುರಿಸಬಹುದು.

– ಆಶೀಷ್ ದೇಸಾಯಿ

ಬೆಳಕು ನನ್ನ ಜೀವನದಲ್ಲಿ ಅನೇಕ ಸಕಾರಾತ್ಮಕ ಬದಲಾವಣೆಗಳನ್ನು ತಂದಿರುವುದರಿಂದ ನಾನೀಗ ಅತ್ಯಂತ ಪ್ರಶಾಂತವಾಗಿದ್ದೇನೆ.

– ಸುಗಂಧ್ ಅವಂತಿಕಾ

ಈಗ ನಾನು ಹಿಂದಿಗಿಂತಲೂ ವ್ಯವಸ್ಥಿತವಾದ ಜೀವನವನ್ನು ನಡೆಸುತ್ತಿದ್ದೇನೆ. ಧ್ಯಾನ ನನ್ನ ಜೀವನದ ಪ್ರತಿ ಹಂತದಲ್ಲೂ ಸಹಾಯ ಮಾಡುತ್ತಿದೆ. ತೀರ್ಮಾನ ತೆಗೆದುಕೊಳ್ಳುವ ಸಾಮರ್ಥ್ಯ ಈಗ ಹೆಚ್ಚಾಗಿದೆ. ಮೊದಲು ಕಷ್ಟವೆನಿಸುತ್ತಿದ್ದ ಎಂತಹ ಕಠಿಣ ಸಂದರ್ಭಗಳನ್ನೂ ಈಗ ಅತ್ಯಂತ ಸುಲಭವಾಗಿ ನಿರ್ವಹಿಸುತ್ತೇನೆ.

– ಪ್ರಿಯಾಂಸ್ಸಿ ಸಿಂಗ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ